ಸಂಪುಟ: 06 ಸಂಚಿಕೆ: 107 ಪುಟಗಳು: 08 ಮಂಗಳವಾರ 30 ಜೂನ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಓದಿದ ಪುಟವನ್ನೇ ಓದುತ್ತ ಕುಳಿತರೆ ಮುಂದಿನ ಅಧ್ಯಾಯವನ್ನು ಅಧ್ಯಯನ ಮಾಡುವುದು ಯಾವಾಗ? ಹಿಡಿದ ಕೆಲಸ ಮುಗಿಸಿ. ಮುಂದೆ ಸಾಗೋಣ!

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಪಿಯುಸಿ ವಿದ್ಯಾರ್ಥಿಗಳಿಗೆ ಇನ್ನೂ ಪಠ್ಯ ಪುಸ್ತಕ ನೀಡದ ರಾಜ್ಯ ಸರ್ಕಾರ

• ಉದಯವಾಹಿನಿ,ಬೆಂಗಳೂರು

ರಾಜ್ಯ ಸರ್ಕಾರ ಮೇ ಅಂತ್ಯದೊಳಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸುವುದಾಗಿ ಘೋಷಿಸಿದ್ದರೂ, ಕರ್ನಾಟಕದ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳಿಗೆ ಇನ್ನೂ ಪುಸ್ತಕಗಳು ಲಭ್ಯವಾಗಿಲ್ಲ. ಶೈಕ್ಷಣಿಕ ವರ್ಷ ಆರಂಭವಾಗಿ ಹಲವು ವಾರಗಳೇ ಕಳೆದರೂ ವಿದ್ಯಾರ್ಥಿಗಳು ಪಾಠ ಕಲಿಯಲು ಸಮಸ್ಯೆ ಅನುಭವಿಸುತ್ತಿದ್ದಾರೆ.

ರಾಜ್ಯ ಸರ್ಕಾರ ಇದೂವರೆಗೆ 1ರಿಂದ 10ನೇ ತರಗತಿವರೆಗೆ ಮಾತ್ರ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಿದೆ. ಪಿಯುಸಿ ಪುಸ್ತಕಗಳ ವಿತರಣೆಯಲ್ಲಿ ವಿಳಂಬವಾಗಿದೆ. ಬೆಂಗಳೂರು, ಯಾದಗಿರಿ, ಹಾಸನ, ತುಮಕೂರು, ಮೈಸೂರು, ಬಳ್ಳಾರಿ ಹಾಗೂ ರಾಯಚೂರು ಸೇರಿದಂತೆ ಕನಿಷ್ಠ ಏಳು ಜಿಲ್ಲೆಗಳ ಸರ್ಕಾರಿ ಪಿಯು ಕಾಲೇಜುಗಳಿಗೆ ಭಾಗಶಃ ಪುಸ್ತಕಗಳು ಮಾತ್ರ ತಲುಪಿವೆ. ಬಂದಿರುವ ಪುಸ್ತಕಗಳು ವಿದ್ಯಾರ್ಥಿಗಳಿಗೆ ಸಾಕಾಗುತ್ತಿಲ್ಲ. ಪಿಯು ಶಿಕ್ಷಣ ಅತ್ಯಂತ ಮಹತ್ವದ ಹಂತವಾಗಿದೆ.

## ಜಿಬಿಎ ಚುನಾವಣೆ : ಹೆಚ್ಚು ಮಹಿಳಾ ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಮುಂದಾದ ಜೆಡಿಎಸ್

• ಉದಯವಾಹಿನಿ, ಬೆಂಗಳೂರು

ಮುಂಬರುವ ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಪಂಚ ನಗರ ಪಾಲಿಕೆಗಳ ಚುನಾವಣೆಯಲ್ಲಿ ಹೆಚ್ಚು ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲು ಜೆಡಿಎಸ್ ಮುಂದಾಗಿದೆ. ಜೆಡಿಎಸ್ ಮಹಿಳಾ ವಿಭಾಗದ ಸಭೆಯಲ್ಲಿ ಪಕ್ಷದ ರಾಜ್ಯಾಧ್ಯಕ್ಷರಾದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಜಿಬಿಎ ವ್ಯಾಪ್ತಿಯ ನಗರ ಪಾಲಿಕೆಗಳ ಚುನಾವಣೆಯಲ್ಲಿ ಮಹಿಳೆಯರಿಗೆ ಹೆಚ್ಚು ಅವಕಾಶ ನೀಡುವ ಭರವಸೆಯನ್ನು ನೀಡಿದ್ದಾರೆ. ಮಹಿಳೆಯರನ್ನು ನಿರ್ಲಕ್ಷಿಸಿ, ಪಕ್ಷ ಕಟ್ಟಲು ಸಾಧ್ಯವಿಲ್ಲ. ಹಾಗೆಯೇ ಮಹಿಳೆಯರನ್ನು ಅಲಕ್ಷಿಸಿ ಚುನಾವಣೆಯನ್ನು ಮಾಡಲಾಗದು. ಮಹಿಳೆಯರಿಗೆ ಸಮಪಾಲು ನೀಡಲೇಬೇಕು. ಅದರಂತೆಯೇ ಜಿಬಿಎ ವ್ಯಾಪ್ತಿಯ ನಗರ ಪಾಲಿಕೆಗಳಲ್ಲಿ ಒಟ್ಟು ಸ್ಥಾನಗಳ ಪೈಕಿ 180ಕ್ಕೂ ಹೆಚ್ಚು ವಾರ್ಡುಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಈ ಹಿನ್ನೆಲೆಯಲ್ಲಿ ಪಕ್ಷದಲ್ಲಿ ಮಹಿಳೆಯರಿಗೆ ಹೆಚ್ಚು ಅವಕಾಶ ನೀಡುವುದಾಗಿ ಅವರು ಹೇಳಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಹಿಳಾ ಮೀಸಲಾತಿಯ ಕನಸು ಕಂಡವರು. ಪ್ರಧಾನಿ ನರೇಂದ್ರ ಮೋದಿಯವರು ಆ ಕನಸನ್ನು ಅನುಷ್ಠಾನಕ್ಕೆ ತರಲು ಶ್ರಮಿಸಿದರು. ಇವರಿಬ್ಬರೂ ನಾಯಕರ ದೂರದೃಷ್ಟಿಯ ಫಲವಾಗಿ ಶೇ.33ರಷ್ಟು ಮಹಿಳೆಯರು ಜನಪ್ರತಿನಿಧಿ ಸಭೆಗಳಲ್ಲಿ ಅವಕಾಶ ಪಡೆಯಲಿದ್ದಾರೆ. ಇದು ಭಾರತೀಯ ರಾಜಕಾರಣದಲ್ಲಿ ದೊಡ್ಡ ಪರಿವರ್ತನೆ ಎಂದು ಅವರು ಬಣ್ಣಿಸಿದ್ದಾರೆ.

ವೈಯಕ್ತಿಕ ವರ್ಚಸ್ಸು ಮಾತ್ರವಲ್ಲ ಪಕ್ಷದ ಸಂಘಟನೆ ಮಾಡುವ ಶಕ್ತಿ ಇದ್ದವರನ್ನು ಅಭ್ಯರ್ಥಿಗಳನ್ನಾಗಿ ಮಾಡಲು ಪರಿಗಣಿಸಲಾಗುವುದು. ಪಕ್ಷನಿಷ್ಠೆ ಜೊತೆಗೆ ಜನಪರ ಹೋರಾಟಗಳಲ್ಲಿ ಹೆಚ್ಚು ತೊಡಗಿಸಿಕೊಂಡವರಿಗೆ ಅವಕಾಶ ನೀಡಲಾಗುವುದು.

## ಎಸ್‌ಐಆರ್ : ಅರ್ಹರು ಅವಕಾಶ ವಂಚಿತರಾಗದಂತೆ ಎಚ್ಚರಿಕೆ ವಹಿಸಲು ಪ್ರಿಯಾಂಕ್ ಖರ್ಗೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅರ್ಹ ಮತದಾರರನ್ನು ಅವಕಾಶ ವಂಚಿತರಾಗದಂತೆ ಎಚ್ಚರಿಕೆ ವಹಿಸಬೇಕೆಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತದಾರರ ಪಟ್ಟಿ ತೀವ್ರ ಪರಿಷ್ಕರಣೆಗೆ ನಮ ವಿರೋಧವಿಲ್ಲ. ಎಸ್‌ಐಆರ್ ಪ್ರಕ್ರಿಯೆ ಚುನಾವಣಾ ಆಯೋಗದ ಹಕ್ಕು ಮತ್ತು ಖಡ್ಡಾಯ. ಅದಕ್ಕಿಂತಲೂ ಮುಖ್ಯವಾಗಿ ಶುದ್ಧವಾದ ಮತ್ತು ಉತ್ತಮವಾದ ಮತದಾರರ ಪಟ್ಟಿ ನೀಡುವುದು ಆಯೋಗದ ಜವಾಬ್ದಾರಿ ಎಂದು ಹೇಳಿದರು. ಇತ್ತೀಚೆಗೆ ತಮಿಳುನಾಡು, ಕೇರಳ, ಪಶ್ಚಿಮಬಂಗಾಳ ಸೇರಿದಂತೆ ಹಲವು ಕಡೆಗಳಲ್ಲಿ ಎಸ್‌ಐಆರ್ ನಡೆದಾಗ, ಬಡವರನ್ನು ಅವಕಾಶದಿಂದ ವಂಚಿತರನ್ನಾಗಿ ಮಾಡಲಾಗಿದೆ. ಹೀಗಾಗಿ ಆಯೋಗಕ್ಕೆ ನಾವು ಕೆಲ ಪ್ರಶ್ನೆಗಳನ್ನು ಕೇಳಿದ್ದೇವೆ. ಅವುಗಳಿಗೆ ಈವರೆಗೂ ಉತ್ತರ ಬಂದಿಲ್ಲ ಎಂದರು.

ಪಶ್ಚಿಮಬಂಗಾಳದಲ್ಲಿ 89 ಲಕ್ಷ ಜನರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಅವರಿಗೆ ನ್ಯಾಯಧೀಕರಣದಲ್ಲೂ ಪ್ರಶ್ನೆ ಮಾಡಲು ಅವಕಾಶ ಇಲ್ಲವಾಗಿದೆ. ನ್ಯಾಯಧೀಕರಣದಲ್ಲಿ ಒಬ್ಬ ನ್ಯಾಯಾಧೀಶರು ರಾಜೀನಾಮೆ ನೀಡಿದ್ದಾರೆ. ಮತದಾರರ ಪಟ್ಟಿ ಪರಿಷ್ಕರಣೆ ಏಕಾಏಕಿ ಸಾಧ್ಯವಿಲ್ಲ.

4 ವರ್ಷ ಸಮಯ ಬೇಕು ಎಂದಿದ್ದಾರೆ. ಆಯೋಗದ ಅಧಿಕಾರಿಗಳು ನಾವು ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡಿ, ಬಳಿಕ ಎಸ್‌ಐಆರ್ ಮಾಡಲಿ ಎಂದು ಹೇಳಿದರು. ಬಲವಂತವಾಗಿ ರೈತರಿಂದ ಭೂಮಿ ವಶಪಡಿಸಿಕೊಳ್ಳಲು ಸಾಧ್ಯವಿಲ್ಲ. ಭೂ ಸ್ವಾಧೀನ ಕಾಯ್ದೆ ಸ್ಪಷ್ಟವಾಗಿದೆ. ರೈತರು ಸ್ವ ಇಚ್ಛೆಯಿಂದ ಭೂಮಿ ಕೊಟ್ಟರೆ, ಅಲ್ಲಿ ಅಭಿವೃದ್ಧಿ ಯೋಜನೆಗಳಾಗುತ್ತವೆ. ದೇವನಹಳ್ಳಿ ಬಳಿಯ ಚನ್ನರಾಯ ಪಟ್ಟಣದ ಸಮೀಪ ಭೂ ಸ್ವಾಧೀನಕ್ಕೆ ವಿರೋಧ ವ್ಯಕ್ತವಾಯಿತು.

## 4,500 ಎಲೆಕ್ಟ್ರಿಕ್ ಬಸ್‌ಗಳಿಗೆ ರಾಜ್ಯ ಸರ್ಕಾರ ಅನುಮೋದನೆ ನೀಡುತ್ತಿಲ್ಲ : ತೇಜಸ್ವಿ ಸೂರ್ಯ ಆರೋಪ

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಲು ಕೇಂದ್ರ ಸರ್ಕಾರ ಮಂಜೂರು ಮಾಡಿರುವ 4,500 ಎಲೆಕ್ಟ್ರಿಕ್ ಬಸ್‌ಗಳಿಗೆ ರಾಜ್ಯ ಸರ್ಕಾರದಿಂದ ಅಗತ್ಯ ಅನುಮೋದನೆ ಮತ್ತು ಬೆಂಬಲ ಸಿಗುತ್ತಿಲ್ಲ ಎಂದು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಗಂಭೀರ ಆರೋಪ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಸ್‌ಗಳನ್ನು ಪಡೆದುಕೊಳ್ಳಲು ರಾಜ್ಯ ಸರ್ಕಾರ ತನ್ನ ಪಾಲಿನ ಅತ್ಯಲ್ಪ ಮೊತ್ತದ ಹಣವನ್ನು ಹೂಡಿಕೆ ಮಾಡಬೇಕಿದೆ. ಆದರೆ, ಸಾರ್ವಜನಿಕ ಹಿತಾಸಕ್ತಿಯ ಈ ಯೋಜನೆಗೆ ಒಪ್ಪಿಗೆ ನೀಡಲು ಸರ್ಕಾರ ಹಿಂದೇಟು ಹಾಕುತ್ತಿದೆ. ಬಸ್ಸುಗಳ ವಿಳಂಬದ ಕುರಿತು ನಾನು ಸಂಸತ್ತಿನಲ್ಲಿ ಧ್ವನಿ ಎತ್ತಿದ್ದು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಸಹ ಇದಕ್ಕೆ ಪೂರಕವಾಗಿ ಉತ್ತರಿಸಿದ್ದಾರೆ.



# ಬಿಜೆಪಿಯಲ್ಲಿ ಸಂಚಲನ

## ಬದಲಾವಣೆಯ ಕಂಪನ



### ವಿಜಯೇಂದ್ರ ಬಗ್ಗೆ ಮಾತನಾಡಿದ್ರೆ, ಸಹಿಸುವುದಿಲ್ಲ

**ಪರಿಷತ್ ಚುನಾವಣೆಯಲ್ಲಿ ವಿಜಯೇಂದ್ರಗೆ ಅವರಿಗೆ ಕೆಟ್ಟ ಹೆಸರು ತರಲು ಅಡ್ಡ ಮತದಾನ ಮಾಡಿದ್ದಾರೆ . ತಾಕತ್ತು ಇದ್ದರೆ ಯಡಿಯೂರಪ್ಪ ಬಿಜೆಪಿಗೆ ಅವಶ್ಯಕತೆ ಇಲ್ಲ ಅಂತಾ ಹೇಳಲಿ ನೋಡೋಣಾ. ಇನ್ನೂ ಮುಂದೆ ವಿಜಯೇಂದ್ರ ಬಗ್ಗೆ ಅವಹೇಳನವಾಗಿ ಮಾತಾಡಿದ್ರೆ ಸಹಿಸುವುದಿಲ್ಲ. ಯಡಿಯೂರಪ್ಪ ಕಟ್ಟಿದ್ದ ಪಕ್ಷಕ್ಕೆ ಇವರೆಲ್ಲ ಬಂದು ಈಗ ಆವರ ಕುಟುಂಬ ಆವರ ಬಗ್ಗೆ ಮಾತಾಡುತ್ತಾರೆ ಇದು ಒಳ್ಳೆಯದೆಲ್ಲ. 2028ಕ್ಕೆ ಆವರ ಮುಖಂಡತ್ವದಲ್ಲಿ ಚುನಾವಣೆಗೆ ಹೋಗುತ್ತೇವೆ. ರಾಷ್ಟ್ರೀಯ ನಾಯಕರು ಬದಲಾವಣೆ ಮಾಡಲ್ಲ ಅವರೇ ಮುಂದುವರೆಯುತ್ತಾರೆ. ವಿಜಯೇಂದ್ರ ಅವರೇ ಮುಂದುವರೆಯಬೇಕು. ಇಲ್ಲದಿದ್ರೆ ನಾವು ಸಂಘಟನೆ ಮಾಡಿ ಹೋರಾಡುತ್ತೇವೆ.**

**ಆಂತರಿಕ ವಿಚಾರವನ್ನು ಮಾತಾಡಬಾರದು ಅಂತಾ ಮೌನವಾಗಿದ್ದೆ. ವಿಜಯೇಂದ್ರ ಬಗ್ಗೆ ಮಾತಾಡ್ರಿ, ನಾವು ಅದೇ ತರ ಉತ್ತರ ಕೊಡುತ್ತೇವೆ .ಕುಮಾರ್ ಬಂಗಾರಪ್ಪ ನನ್ನು ಕರೆತಂದು ಶಾಸಕರನ್ನಾಗಿ ಮಾಡಿದ್ದು ವಿಜಯೇಂದ್ರ, ಯಡಿಯೂರಪ್ಪ. ಯಡಿಯೂರಪ್ಪ ವಿಜಯೇಂದ್ರರವರ ಬೆಂಬಲ ಇಲ್ಲದೆ ಸೊರಬದಲ್ಲಿ ಗೆದ್ದು ತೋರಿಸಲಿ. ಕುಮಾರ್ ಬಂಗಾರಪ್ಪ ಜಿಲ್ಲಾ ಪಂಚಾಯತಿ ಸದಸ್ಯ ಆಗಲು ಯೋಗ್ಯತೆ ಇಲ್ಲ ಎಂದು ಕಿಡಿಕಾರಿದರು.**



• ಉದಯವಾಹಿನಿ,ಬೆಂಗಳೂರು

ಕರ್ನಾಟಕ ಬಿಜೆಪಿಯಲ್ಲಿ ಮತ್ತೆ ನಾಯಕಯತ್ವ ಬದಲಾವಣೆ ಚರ್ಚೆ ಮುನ್ನಲೆಗೆ ಬಂದಿದೆ. ಇದಕ್ಕೆ ಪೂಕರವೆಂಬಂತೆ ರಾಜ್ಯಾಧ್ಯಕ್ಷ ಸ್ಥಾನದಿಂದ ಬಿವೈ ವಿಜಯೇಂದ್ರರನ್ನು ಕೆಳಗಿಳಿಸಲು ದೆಹಲಿ ನಾಯಕರಲ್ಲಿ ಒತ್ತಾಯ ಮಾಡಿರುವ ಡಿವಿ ಸದಾನಂದ ಗೌಡ ಅವರದ್ದು ಎನ್ನಲಾದ ಆಡಿಯೋ ವೈರಲ್ ಆಗಿದೆ.

ಬಿಜೆಪಿ ದೆಹಲಿ ಮಟ್ಟದ ನಾಯಕ ಪ್ರದೀಪ್ ಎಂಬುವವರ ಜೊತೆಗೆ ಇಂಗ್ಲಿಷ್ ಭಾಷೆಯಲ್ಲಿ ನಡೆಸಿದ ಸಂಭಾಷಣೆ ಇದಾಗಿದ್ದು, ಇದರಲ್ಲಿ ಮೂರು ತಿಂಗಳ ಬಳಿಕ ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸಿ ಎಂದು ಇದರಲ್ಲಿ ಬೇಡಿಕೆ ಇಡಲಾಗಿದೆ. ಈ ಆಡಿಯೋ ಇದೀಗ ರಾಜ್ಯ ಬಿಜೆಪಿಯಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದ್ದು, ಮತ್ತೆ ಬಣ ಬಡಿದಾಟ ಶುರುವಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿವೈ ವಿಜಯೇಂದ್ರ ಅವರು ಇನ್ನು ಮೂರು ತಿಂಗಳಲ್ಲಿ ಮೂರು ವರ್ಷ ಪೂರೈಸಲಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷರ ಅವಧಿ ಮೂರು ವರ್ಷ ಇರುವುದು ಬಿಜೆಪಿಯಲ್ಲಿ ನಡೆದುಕೊಂಡು ಬಂದ ನಿಯಮವಾಗಿದೆ. ಇದೇ ಸಂದರ್ಭದಲ್ಲಿ ದೆಹಲಿ ಮಟ್ಟದ ನಾಯಕರೊಬ್ಬರ ಜೊತೆಗೆ ಡಿವಿ ಸದಾನಂದ ಗೌಡ ಅವರು ಮಾತನಾಡಿದ್ದಾರೆ ಎಂಬ ಆಡಿಯೋ ಹೊರಬಂದಿದ್ದು, ಡಿವಿ ಸದಾನಂದಗೌಡ ಅವರ ಧ್ವನಿಯನ್ನೇ ಹೋಲುವಂತಹ ಆಡಿಯೋ ಇದಾಗಿದೆ. ಹೀಗಾಗಿ ಸದ್ಯ ಬಿಜೆಪಿ ಪಾಳಯದಲ್ಲಿ ಸಂಚಲನ ಸೃಷ್ಟಿಸಿದೆ. ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ವರೆಗೂ ವಿಜಯೇಂದ್ರ ಮುಂದುವರೆಯಲು ಬಿಡಿ, ಬಳಿಕ ರಾಜ್ಯಾಧ್ಯಕ್ಷ ಸ್ಥಾನದಿಂದ ತೆಗೆದು ಹಾಕಿ ಎಂಬುವುದು ಆಡಿಯೋದಲ್ಲಿ ಉಲ್ಲೇಖವಾಗಿದೆ. ಈಗಲೇ ತೆಗೆದು ಹಾಕಿದ್ರೆ, ಬಿಜೆಪಿ ಮತ್ತೆ ಲಿಂಗಾಯತ ವಿರೋಧಿ ಅಂತ ಟೀಕೆಗೆ ಗುರಿ ಆಗುವ ಅಪಾಯ ಇದೆ. ಇದು ಪಕ್ಷಕ್ಕೆ ಡ್ಯಾಮೇಜ್ ಆಗಬಹುದು. ಹಾಗಾಗಿ ಮುಂದಿನ ಅಕ್ಟೋಬರ್ ವರೆಗೂ ಕಾದು ವಿಜಯೇಂದ್ರ ಅವರನ್ನು ಪದವಿಯಿಂದ ತೆಗೆಯುವಂತೆ ಮನವಿ ಮಾಡಲಾಗಿದೆ. ಬಿವೈ ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿ ಮೂರು ವರ್ಷ ಪೂರ್ಣಗೊಳಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಗೊಂದಲ ಮಾಡಿಕೊಳ್ಳುವುದು ಯಾಕೆ? ಎರಡು ತಿಂಗಳ ಒಳಗಾಗಿ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಕೆಳಗಿಳಿಸಬೇಕಾಗಿದೆ. ಎರಡು ತಿಂಗಳಲ್ಲಿ ಅವರ ಅವಧಿ ಕೂಡಾ ಮುಕ್ತಾಯವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಯಾರೂ ಇದನ್ನು ಪ್ರಶ್ನೆ ಮಾಡುವುದಿಲ್ಲ. ಪಕ್ಷದಲ್ಲಿ ಮುಂದುವರಿಯಬೇಕೆಂದು ಯಾವುದೇ ಷರತ್ತು ಇಲ್ಲ. ಹಾಗಾಗಿ ಯೋಜನಾಬದ್ಧವಾಗಿ ಅಕ್ಟೋಬರ್‌ನಲ್ಲಿ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ. ಈ ಕೆಲಸ ಮಾಡಿದರೆ, ಲಿಂಗಾಯತರು ಸ್ವಲ್ಪ ವಿರೋಧ ಮಾಡಬಹುದು. ಆದರೆ ಯೋಗ್ಯರನ್ನು ನಾವು ರಾಜ್ಯಾಧ್ಯಕ್ಷರನ್ನಾಗಿ ಮಾಡಿದರೆ ಎಲ್ಲಾ ವಿರೋಧಗಳು ತಣ್ಣಗಾಗಲಿದೆ. ಇದು ನನ್ನ ಅಭಿಪ್ರಾಯವಾಗಿದೆ.

ಬೇರೆ ಉತ್ತಮ ಅವಕಾಶಗಳು ಇದ್ದರೆ ನಾನು ಪಕ್ಷದ ನಿರ್ಧಾರಕ್ಕೆ ಬದ್ಧವಾಗಿದ್ದೇನೆ. ನಾನು ದೇವರಲ್ಲಿ ನಂಬಿಕೆ ಇಟ್ಟಿದ್ದೇನೆ. ನನ್ನನ್ನು ಜನರು ಒಪ್ಪಿಕೊಂಡಿದ್ದಾರೆ.

ಬಸ್ ನಿಲ್ದಾಣದಲ್ಲಿ ಕಾಣಿಸಿಕೊಂಡರೂ 25–30 ಆಟೋ ಚಾಲಕರು ಬಂದು ಮಾತನಾಡಿಸುತ್ತಾರೆ. ನಾನು ಆ ರೀತಿಯ ಸಂಪರ್ಕ ಇಟ್ಟಿದ್ದೇನೆ ಎಂದು ಪ್ರದೀಪ್ ಎಂಬುವವರ ಜೊತೆಗೆ ಮಾತನಾಡಿದ ಆಡಿಯೋನಲ್ಲಿದೆ.

ಇನ್ನು ಈ ಆಡಿಯೋ ವೈರಲ್ ಆಗುತ್ತಿದ್ದಂತೆಯೇ ಈ ಬಗ್ಗೆ ಮಾತನಾಡಿರುವ ಡಿವಿಎಸ್, ಆಡಿಯೋ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಈ ಆಡಿಯೋ ಬಗ್ಗೆ ನನಗೆ ಗೊತ್ತಿಲ್ಲ, ಹಾಗಾಗಿ ಉತ್ತರ ಕೊಡುವುದಿಲ್ಲ. ಆಡಿಯೋ ಬಗ್ಗೆ ಸತ್ಯ ಸಂಗತಿ ಹೊರಬರಲಿ. ನನ್ನ ಬಗ್ಗೆ ಬಹಳ ದಿನದಿಂದ ಚರ್ಚೆ ಆಗುತ್ತಿತ್ತು. ಕೋರ್ ಕಮಿಟಿ ಸಭೆಯಲ್ಲಿ ಕೆಲವು ಮಾತುಗಳನ್ನು ಹೇಳಿದ್ದೇನೆ. ಕೇಂದ್ರ ನಾಯಕರು, ರಾಜ್ಯ ನಾಯಕರು ಕೇಳಿದ್ರೆ, ಉತ್ತರ ಕೊಡುತ್ತೇನೆ ಎಂದು ಸ್ಪಷ್ಟಪಡಿಸಿದರು.



### ವಿಶ್ವನಾಥ್ ವಾಕ್ಸಮರ, ಬಿಜೆಪಿ ಭಿನ್ನಮತ ಸ್ಫೋಟ

**ಬಿಜೆಪಿ ಪಕ್ಷದ ಇಬ್ಬರು ಪ್ರಭಾವಿ ನಾಯಕರಾದ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಮತ್ತು ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ನಡುವಿನ ವಾಕ್ಸಮರ ತಾರಕಕ್ಕೇರಿದ್ದು, ಇದು ಈಗ ಕಾನೂನು ಹೋರಾಟ ಮತ್ತು ರಾಜಕೀಯ ನಿವೃತ್ತಿಯ ಸವಾಲಿನ ರೂಪ ಪಡೆದುಕೊಂಡಿದೆ. ಯಲಹಂಕದಲ್ಲಿ ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮದ ವಿವಾದದಿಂದ ಆರಂಭವಾದ ಈ ಕಿಡಿ, ಈಗ ಗೂಂಡಾಗಿರಿ, ಭೂಗತ ಲೋಕದ ನಂಟು ಹಾಗೂ ಬಿಡಿಎ ಹಗರಣಗಳ ಆರೋಪ-ಪ್ರತ್ಯಾರೋಪಗಳಿಗೆ ಸಾಕ್ಷಿಯಾಗಿದೆ.**

**1** ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಿಂದ ಬಿವೈ ವಿಜಯೇಂದ್ರ ಅವರನ್ನು ಕೆಳಗಿಳಿಸಲಾಗುತ್ತಾ?

**2** ಡಿವಿ ಸದಾನಂದ ಗೌಡ ಅವರದ್ದು ಎನ್ನಲಾಗಿರುವ ಆಡಿಯೋ ವೈರಲ್ ಆಗುತ್ತಿದೆ

**3** ಡಿವಿ ಸದಾನಂದ ಗೌಡ ಅವರದ್ದು ಎನ್ನಲಾಗಿರುವ ಆಡಿಯೋದಲ್ಲಿ ಏನಿದೆ



### ರೇಣುಕಾಚಾರ್ಯ ಖಡಕ್ ಎಚ್ಚರಿಕೆ



**ಇನ್ನು ವಿಜಯೇಂದ್ರರನ್ನು ಅಧ್ಯಕ್ಷ ಸ್ಥಾನದಿಂದ ಕಿತ್ತು ಬಿಸಾಕಿ ಅನ್ನೋ ಆಡಿಯೋ ವೈರಲ್ ಆಗುತ್ತಿದ್ದಂತೆಯೇ ಯಡಿಯೂರಪ್ಪ ಬಣದ ನಾಯಕರ ಆಕ್ರೋಶಕ್ಕೆ ಕಾರಣವಾಗಿದೆ. ಈ ಬಗ್ಗೆ ದಾಣವಣಗೆರೆಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಬಿಎಸ್‌ವೈ ಬಣದ ಪ್ರಮುಖ ನಾಯಕ ಎಂಪಿ ರೇಣುಕಾಚಾರ್ಯ, ಯಡಿಯೂರಪ್ಪನವರ ಅಶೀರ್ವಾದದಿಂದ ಕೆಲವರು ಸಿಎಂ ಆಗಿದ್ದಾರೆ, ಸಚಿವರು ಆಗಿದ್ದಾರೆ.**

**ಏನಾದರೂ ಪಿತೂರಿ ನಡೆಸಿದರೆ ನಾವು ಸುಮ್ಮನೆ ಕೂರುವುದಿಲ್ಲ.**

**ಬಿಜೆಪಿ ರಾಜ್ಯಾಧ್ಯಕ್ಷರಾಗಿ ಎರಡು ವರ್ಷ ಪೂರೈಸಿದ್ದಾರೆ. ಪಕ್ಷ ಸಂಘಟನೆಯಲ್ಲಿ ಉತ್ತಮ ಕೆಲಸ ಮಾಡಿದ್ದಾರೆ. ಯಡಿಯೂರಪ್ಪ ಪಕ್ಷ ಸಂಘಟನೆ ಮಾಡದಿದ್ರೆ ಈಗ ಮಾತನಾಡುವವರು ಇರುತ್ತಿರಲಿಲ್ಲ ಆವರ ಮಗ ಅಂತಾ ಹೇಳುತ್ತಿಲ್ಲ ಅವರು ಜಾತ್ಯತೀತ ವ್ಯಕ್ತಿ . ರಾಜ್ಯದಲ್ಲಿ ಅನೇಕ ಹೋರಾಟವನ್ನು ವಿಜಯೇಂದ್ರ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.**

- ವಿಜಯೇಂದ್ರನನ್ನು ಕಿತ್ತು ಬಿಸಾಕಿ''
- ಬಿಜೆಪಿಯಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದ ಆಡಿಯೋ
- ವಿಜಯೇಂದ್ರರನ್ನ ಕೆಳಗಿಳಿಸಲು ಪ್ಲ್ಯಾನ್ ಸದಾನಂದ ಗೌಡರದ್ದು ಎನ್ನಲಾದ ಆಡಿಯೋ ವೈರಲ್
- ಬಿಜೆಪಿಯಲ್ಲಿ ತಲ್ಲಣ!

### ಬಿಜೆಪಿಯಲ್ಲಿ ಅಲ್ಲೋಲ ಕಲ್ಲೋಲ

**ಸಾಮಾಜಿಕ ಜಾಲತಣದಲ್ಲಿ ವೈರಲ್ ಆಗಿರುವ ಆಡಿಯೋ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ಈ ಆಡಿಯೋ ಬಗ್ಗೆ ನನಗೆ ಗೊತ್ತಿಲ್ಲ, ಹೀಗಾಗಿ ಉತ್ತರ ಕೊಡುವುದಿಲ್ಲ. ಆಡಿಯೋ ಕುರಿತು ಸತ್ಯ ಸಂಗತಿ ಹೊರಬರಲಿ. ನನ್ನ ಬಗ್ಗೆ ಬಹಳ ದಿನದಿಂದ ಚರ್ಚೆ ಆಗುತ್ತಿತ್ತು. ಬಿಜೆಪಿ ಕೋರ್ ಕಮಿಟ ಸಭೆಯಲ್ಲಿ ಕೆಲವು ಮಾತುಗಳನ್ನು ಹೇಳಿದ್ದೇನೆ. ಕೇಂದ್ರ-ರಾಜ್ಯದ ನಾಯಕರು ಪ್ರಶ್ನಿಸಿದರೆ ನಾನು ಉತ್ತರ ಕೊಡುತ್ತೇನೆ . -ಡಿ.ವಿ.ಸದಾನಂದಗೌಡ ಮಾಜಿ ಮುಖ್ಯಮಂತ್ರಿ**

## ಒಬ್ಬರನ್ನು ಹಿಂದೆ ಹಾಕಿಯೇ ಮತ್ತೊಬ್ಬರು ಬರಬೇಕು

• ಉದಯವಾಹಿನಿ, ಬೆಂಗಳೂರು

ಒಬ್ಬರನ್ನು ಹಿಂದೆ ಹಾಕಿಯೇ ಮತ್ತೊಬ್ಬರು ಬರಬೇಕು. ಅದು ರಾಜಕೀಯ ಸಿದ್ಧಾಂತವಾಗಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ನಗರದಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರನ್ನು ಕಡೆಗಣಿಸಲಾಗುತ್ತಿದೆಯಾ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸುತ್ತಾ, ಇದು ಸ್ಪೀಡ್ ಆಗಿರುವ ಕಾಲ, ನಾವು ಆ ಸ್ಪೀಡ್‌ಗೆ ಓಡಬೇಕು. ರಾಜಕಾರಣ ಅಂದರೆ ಹಾಗೇ ಓಡದೇ ಇದ್ದರೆ ಟ್ರೇನ್ ಮಿಸ್ ಆಗುತ್ತದೆ. ರೈಲು ಮಿಸ್ ಆದರೆ ತುಮಕೂರಿಗೋ, ಅರಸೀಕೆರೆಗೋ ಗಾಡಿಯಲ್ಲಿ ಹೋಗಿಯಾದ್ರೂ ರೈಲು ಹಿಡಿಯಬೇಕು. ರೈಲು ಹಿಡಿಯದೇ ಇದ್ದರೆ ಜನರೇ ಮರೆತುಬಿಡ್ತಾರೆ. ಇದು ನಾನು ಹೇಳುವುದಲ್ಲ. ಜನರೇ ಹೇಳುವ ಮಾತು. ರಾಜಕಾರಣ ಅಂದರೆ ಹಾಗೆಯೇ ಎಂದರು. ನಾನು ದೊಡ್ಡ ಲೀಡರ್ ಅಂದ್ರೆ, ರಾಜಕೀಯ ಕೇಳಲ್ಲ. ಬದಲಾವಣೆ ಆಗುತ್ತಾ ಹೋಗುತ್ತದೆ. ನಾನು 20 ವರ್ಷದಲ್ಲಿ ನೋಡಿರುವ ಲೀಡರ್ ಈಗಿಲ್ಲ. ಅವರು ಓಡಿ ಹೋಗಿ ಹತ್ತಿದ್ರೆ, ಇನ್ನೂ ಇರುತ್ತಿದ್ದರು. ನಾನು ಲೀಡರ್ ಆಗಬೇಕು ಅನ್ನೋದು ಎಲ್ಲರಿಗೂ ಇರುತ್ತದೆ. ಅವರು ಮೈಸೂರಲ್ಲೇ ಕೂತು ರಾಜಕಾರಣ ಮಾಡಬಹುದು. ಜನರ ಸಂಪರ್ಕ ಎಲ್ಲಿ ತನಕ ಇರುತ್ತದೆಯೋ ಅಲ್ಲಿ ತನಕ ಲೀಡರ್ ಎಂದು ಮಾರ್ಮಿಕವಾಗಿ ತಿಳಿಸಿದರು.

ಸಿದ್ದರಾಮಯ್ಯ ಸ್ಪೀಡ್ ಯಾಕೆ ಕಮ್ಮಿ ಆಯ್ತು ಎಂಬ ಪ್ರಶ್ನೆಗೆ, ಅದನ್ನ ಅವರನ್ನೇ ಕೇಳಿ. ನಾವು ಅವರಿಗೆ ಓಡಬೇಕು ಅಂತ ಹೇಳ್ತೇವೆ. ರಾಜಕೀಯ ಅಂದ್ರೆ ಓಡಬೇಕು, ಓಡದಿದ್ರೆ ಕೆಲಸ ಆಗಲ್ಲ. ಯಾರು ಫೈಟ್ ಮಾಡ್ತಾರೆ ಅವರು ಉಳಿತಾರೆ. ಫೈಟ್ ಮಾಡ್ಲಿಲ್ಲ ಅಂದ್ರೆ ಜನ ಮರೆಯುತ್ತಾರೆ. ನಾವು ಫ್ರಂಟ್ ಲೈನ್‌ನಲ್ಲಿ ನಿಲ್ಲಬೇಕು. ಇಲ್ಲ ಜನ ಹೊಸ ನಾಯಕನನ್ನ ಆಯ್ಕೆ ಮಾಡ್ತಾರೆ ಎಂದರು.

ಕೆಂಪೇಗೌಡ ಜಯಂತಿಯಲ್ಲಿ ಸಿದ್ದು ಫೋಟೊ ಇಲ್ಲ ಎಂಬ ವಿಚಾರವಾಗಿ ಮಾತನಾಡಿ, ಸರ್ಕಾರಿ ಕಾರ್ಯಕ್ರಮದಲ್ಲಿ ಫೋಟೋ ಹಾಕುವುದಕ್ಕೆ ಅಧಿಕೃತ ಬೇಕಲ್ಲ. ಡಿಸಿ ಎಂದು ಹಾಕಿದ್ರಾ, ಇತ್ತಲ್ಲ. ಬಿಡಿಎಯಿಂದ ಮಾಡಿದ್ರೆ ಅವರೇ ಸ್ಪಷ್ಟನೆ ಕೊಡಬೇಕಲ್ಲ. ನಾವು ಹೇಳೋಕೆ ಆಗುವುದಿಲ್ಲ ಎಂದು ತಿಳಿಸಿದರು.

ಜನರ ಹೃದಯ ಸಿಂಹಾಸನ ಶಾಶ್ವತ ಅಂತಾ ಸಿದ್ದರಾಮಯ್ಯ ಹೇಳಿದ್ದು



ಕರೆಕ್ಟ್ ಆಗಿದೆ. ಪವರ್ ಶಾಶ್ವತವಲ್ಲ. ಜನರ ಸಂಪರ್ಕ ಎಲ್ಲಿವರೆಗೂ ಇರುತ್ತದೋ, ಅಲ್ಲಿವರೆಗೆ ಅವರು ಲೀಡರ್. ಸಿಎಂ ಸ್ಥಾನ ಶಾಶ್ವತವಲ್ಲ ಅದು ನಿಜ. ಜನರ ಬೆಂಬಲವೇ ಶಾಶ್ವತ ಎಂದು ಹೇಳಿದರು. ಇಡಿ ದಾಳಿ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ನಮ್ಮನ್ನೇ ಟಾರ್ಗೆಟ್ ಮಾಡಿದ್ದಾರೋ ಗೊತ್ತಿಲ್ಲ.

ಪೊಲಿಟಿಕಲ್ ಉದ್ದೇಶದಿಂದ ಮಾಡಿದ್ದಾರಾ ಎಂಬುದು ಗೊತ್ತಾಗಲು ಟೈಮ್ ಬೇಕು. ನ್ಯಾಚ್ಯುರಲ್ ಆಗಿ ಮಾಡಿದ್ದಾರೋ ನೋಡಬೇಕು. ರಾಜಕೀಯ ದಾಳಿ ಆಗಿದ್ರೆ ಕಾನೂನು ಹೋರಾಟ ಮಾಡಬೇಕಾಗುತ್ತದೆ ಎಂದರು. ಬಿಡದಿ ಟೌನ್‌ಶಿಪ್ ವಿಚಾರವಾಗಿ ಪ್ರತಿಕ್ರಿಯಿಸಿ, ರೈತರು ಹೋರಾಟ ಮಾಡ್ತಿದ್ದಾರೆ. ನಾನು ದಿನಾ ಟಿವಿಗಳಲ್ಲಿ ನೋಡ್ತಿದ್ದೇನೆ. ಬಿಜೆಪಿ ಜೆಡಿಎಸ್ ನವರು ಕೂಡ ಹೋರಾಟ ಮಾಡ್ತಿದ್ದಾರೆ. ನಮ್ಮ ಹೈಕಮಾಂಡ್ ನಾಯಕರು ಅದನ್ನು ನೋಡ್ತಾರೆ. ಸಿಎಂಗೆ ಅದರ ಬಗ್ಗೆ ಅರಿವಿದೆ. ಚರ್ಚೆ ಮಾಡ್ತಾರೆ.

## ಬೆಂಗಳೂರಿನಿಂದ 100 ಕಿ.ಮೀ. ದೂರದ ಸ್ಥಳಗಳಿಗೆ ಚತುಷ್ಪಥ ರೈಲ್ವೆ : ವಿ.ಸೋಮಣ್ಣ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಿಂದ 100 ಕಿ.ಮೀ. ಸುತ್ತಮುತ್ತ ಇರುವ ನಗರಗಳಿಗೆ ಚತುಷ್ಪಥ ರೈಲ್ವೆ ಮಾರ್ಗಗಳನ್ನು ಅಭಿವೃದ್ಧಿ ಪಡಿಸಲಾಗುವುದು. ಜತೆಗೆ ರಾಜಧಾನಿಯಿಂದ ಕರಾವಳಿ ಭಾಗದ ಮಂಗಳೂರಿಗೆ ಕೂಡ ಇದೇ ರೀತಿ ಚತುಷ್ಪಥ ಮಾರ್ಗ ಅಭಿವೃದ್ಧಿಯನ್ನೂ ಪರಿಗಣಿಸಲಾಗುವುದು ಎಂದು ಕೇಂದ್ರ ರೈಲ್ವೆ ಖಾತೆ ಸಹಾಯಕ ಸಚಿವ ವಿ.ಸೋಮಣ್ಣ ಹೇಳಿದ್ದಾರೆ. ಚನ್ನಪಟ್ಟಣ ತಾಲ್ಲೂಕಿನ ಎಲೆಕೇರಿ ಬಳಿ ನೂತನವಾಗಿ ನಿರ್ಮಿಸಿರುವ ರಸ್ತೆ ಮೇಲ್ಸೇತುವೆ ಉದ್ಘಾಟಿಸಿ ಸೋಮವಾರ ಮಾತನಾಡಿದರು.

ಇದಕ್ಕೂ ಮೊದಲು ರಾಜ್ಯದ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ ಬಿ ಪಾಟೀಲ ಅವರು ಕರ್ನಾಟಕದ ರೈಲ್ವೇ ಬೇಡಿಕೆಗಳನ್ನು ಸಮಾರಂಭದಲ್ಲಿ ಪ್ರಸ್ತಾಪಿಸಿದ್ದರು. ಇದರಲ್ಲಿ ಅವರು ಬೆಂಗಳೂರಿನಿಂದ ತುಮಕೂರು, ಮೈಸೂರು, ಗೌರಿಬಿದನೂರು ಮಾರ್ಗವಾಗಿ ಹಿಂದೂಪುರ ಮತ್ತು ಕೋಲಾರಕ್ಕೆ ಚತುಷ್ಪಥ ಹಳಿ ನಿರ್ಮಿಸಬೇಕು ಎಂದು ಕೋರಿದ್ದರು.ಈ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸೋಮಣ್ಣ, ಬೆಂಗಳೂರು–ತುಮಕೂರು ಚತುಷ್ಪಥ ಮಾರ್ಗದ ಸರ್ವೆ ಮುಗಿದಿದ್ದು, ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆಗಳನ್ನು ಆರಂಭಿಸಲಾಗುವುದು.

ಮುಂದಿನ ಒಂದೂವರೆ- ಎರಡು ವರ್ಷದಲ್ಲಿ ಕಾಮಗಾರಿ ಮುಗಿಸುವ ಉದ್ದೇಶ ಇದೆ. ಹಾಗೆಯೇ ಬೆಂಗಳೂರು–ಮೈಸೂರು ಚತುಷ್ಪಥ ನಿರ್ಮಾಣಕ್ಕೆ ಸಮೀಕ್ಷೆ ಮಾಡಲು ತೀರ್ಮಾನಿಸಲಾಗಿದೆ ಎಂದು ಅವರು ವಿವರಿಸಿದರು.ಎಂ ಬಿ ಪಾಟೀಲರು ಪ್ರಸ್ತಾಪಿಸಿರುವ ಬೇಡಿಕೆಗಳು ಸರಿಯಾಗಿವೆ.



ಅವರ ಕೋರಿಕೆಯಂತೆ ಬೆಂಗಳೂರು–ಕೋಲಾರ ನಡುವೆ ನೇರ ರೈಲು ಸಂಪರ್ಕ ಕಲ್ಪಿಸಲಾಗುವುದು. ಸದ್ಯಕ್ಕೆ ವೈಟ್ ಫೀಲ್ಡ್ ತನಕ ಇರುವ ನಾಲ್ಕು ಪಥದ ಮಾರ್ಗವನ್ನು ಮುಂದಕ್ಕೂ ಕೊಂಡೊಯ್ಯಲಾಗುವುದು. ಇದಕ್ಕೆ ಬೇಕಾದ ಭೂಸ್ವಾಧೀನವನ್ನು ಕೇಂದ್ರ ಸರ್ಕಾರವೇ ನಡೆಸುತ್ತದೆ ಎಂದು ಅವರು ಭರವಸೆ ನೀಡಿದ್ದಾರೆ.ಬೆಂಗಳೂರು–ಮಂಗಳೂರು ಚತುಷ್ಪಥ ಮಾರ್ಗ

ರಾಜಧಾನಿ ಬೆಂಗಳೂರಿನಿಂದ ಕರಾವಳಿಯ ಮಂಗಳೂರಿಗೆ ತ್ವರಿತ ರೈಲು ಸಂಚಾರ ವ್ಯವಸ್ಥೆ ಆಗಬೇಕಿದೆ. ಇದಕ್ಕಾಗಿ ಸಕಲೇಶಪುರ–ಗುಂಡ್ಯ ನಡುವೆ ಸಮಾನಾಂತರವಾಗಿ ರಸ್ತೆ ಮತ್ತು ರೈಲು ಮಾರ್ಗ ಆಗಬೇಕೆಂದು ಪಾಟೀಲ ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ಸ್ಪಂದಿಸಿದ ಸೋಮಣ್ಣ ಅವರು ಇದೊಂದು ಉಪಯುಕ್ತ ಸಲಹೆಯಾಗಿದ್ದು, ಈ ಎರಡೂ ನಗರಗಳ ನಡುವೆ ಚತುಷ್ಪಥ ರೈಲು ಮಾರ್ಗ ಅಭಿವೃದ್ಧಿ ಅಗತ್ಯ ಇದೆ.

ಬಂದರು ನಗರ ಮಂಗಳೂರಿಗೆ ಸಂಪರ್ಕ ಮಾಡುವುದರಿಂದ ಅನೇಕ ಪ್ರಯೋಜನಗಳು ಆಗಲಿವೆ. ಇದು ಕೂಡ ನಮ್ಮ ಆದ್ಯತೆಯಾಗಿದೆ ಎಂದು ಸೋಮಣ್ಣ ವಿವರಿಸಿದ್ದಾರೆ. ತುಮಕೂರು- ಚಿತ್ರದುರ್ಗ- ದಾವಣಗೆರೆ ಮಾರ್ಗದಲ್ಲಿ ಭರದಿಂದ ಕಾಮಗಾರಿ ನಡೆಯುತ್ತಿದೆ.

# ಬರ ಪೀಡಿತ ತಾಲ್ಲೂಕುಗಳನ್ನು ಘೋಷಿಸಿ, 5 ಕೋಟಿ ಅನುದಾನ ನೀಡಲು ಒತ್ತಾಯ

## ಮುಂಗಾರು ಬಿತ್ತನೆ ಚಟುವಟಿಕೆಗಳಲ್ಲಿ ಹಿನ್ನಡೆ ಅಂತರ್ ಜಲಮಟ್ಟ ಕುಸಿದು ಕುಡಿಯುವ ನೀರಿಗೂ ತತ್ವಾರ

• ಉದಯವಾಹಿನಿ, ಬೆಂಗಳೂರು

ರಾಜ್ಯಾದ್ಯಂತ ಮಳೆ ಕೊರತೆಯಿಂದಾಗಿ ಕುಡಿಯುವ ನೀರಿನ ಅಭಾವ ತೀವ್ರವಾಗಿದ್ದು, ಪ್ರತಿ ಕ್ಷೇತ್ರಕ್ಕೂ ಕನಿಷ್ಠ 5 ಕೋಟಿ ರೂ. ಹಣ ಬಿಡುಗಡೆ ಮಾಡಬೇಕು ಅಥವಾ ಬರ ಪೀಡಿತ ತಾಲ್ಲೂಕುಗಳನ್ನು ಘೋಷಣೆ ಮಾಡಬೇಕು ಎಂಬ ಒತ್ತಡ ಹೆಚ್ಚಾಗಿದೆ.

ರಾಜ್ಯ ಸರ್ಕಾರ ಅಭಿವೃದ್ಧಿ ಕೆಲಸಗಳಿಗೆ ಹಣ ಬಿಡುಗಡೆ ಮಾಡುತ್ತಿಲ್ಲ ಎಂದು ಆಡಳಿತ ಪಕ್ಷದ ಶಾಸಕರೇ ಅಸಮಾಧಾನ ಹೊರ ಹಾಕುತ್ತಿದ್ದಾರೆ. ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಇದೇ ರೀತಿಯ ಆರೋಪಗಳು ಕೇಳಿ ಬಂದಿದ್ದವು. ಆದರೆ ಬಹಿರಂಗ ಹೇಳಿಕೆಗಳನ್ನು ನೀಡುತ್ತಿದ್ದ ಶಾಸಕರ ಜೊತೆ ಸಿದ್ದರಾಮಯ್ಯ ಮಾತುಕತೆ ನಡೆಸಿ, ಸಮಾಧಾನ ಪಡಿಸಿದರು. ಹೀಗಾಗಿ ವಾತಾವರಣ ತಿಳಿಯಾಗುತ್ತಿತ್ತು. ಇದರ ನಡುವೆಯೂ ಶಾಸಕ ಬಿ.ಆರ್. ಪಾಟೀಲ್ ಸೇರಿದಂತೆ ಕೆಲವರ ಹೇಳಿಕೆಗಳು ಸರ್ಕಾರಕ್ಕೆ ಮುಜುಗರ ಉಂಟು ಮಾಡಿದ್ದವು. ಕಳೆದ ಮೂರು ವರ್ಷಗಳಿಂದಲೂ ರಾಜ್ಯದಲ್ಲಿ ಮಳೆ ಕೊರತೆ ಇರಲಿಲ್ಲ, 2023ರಲ್ಲಿ ಒಂದಿಷ್ಟು ಬರ ಪರಿಸ್ಥಿತಿ ಇತ್ತು. ಅನಂತರ ಮಳೆಯಾಗಿ ವಾತಾವರಣ ತಿಳಿಯಾಯಿತು. ಸಮೃದ್ಧ ಮಳೆಯಿಂದಾಗಿ ಜಲಾಶಯಗಳು ತುಂಬಿ ತುಳುಕುತ್ತಿದ್ದವು. ಈ ಬಾರಿ ದೇಶಾದ್ಯಂತ ಶೇ. 40ರಷ್ಟು



ಮಳೆ ಕೊರತೆಯ ನಿರೀಕ್ಷೆಗಳಿವೆ. ಈಗಾಗಲೇ ಮುಂಗಾರು ಬಿತ್ತನೆ ಚಟುವಟಿಕೆಗಳಲ್ಲಿ ಹಿನ್ನಡೆಯಾಗಿದೆ. ಮತ್ತೊಂದೆಡೆ ಅಂತರ್ ಜಲಮಟ್ಟ ಕುಸಿದು ಕುಡಿಯುವ ನೀರಿಗೂ ತತ್ವಾರ ಎದುರಾಗಿದೆ.

ಬರ ಪರಿಸ್ಥಿತಿ ನಿರ್ವಹಣೆಗೆ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಖಾತೆಗಳಲ್ಲಿ 175 ಕೋಟಿ ರೂ. ಹಣ ಇದೆ ಎಂದು ಸರ್ಕಾರ ಹೇಳುತ್ತಾ ಬಂದಿದೆ, ಆದರೆ ಅದನ್ನು ಬಳಕೆ ಮಾಡಲು ಸಾಧ್ಯವಾಗುತ್ತಿಲ್ಲ. ಈವರೆಗೂ ಬರ ಘೋಷಣೆಯಾಗಿಲ್ಲ. ತಾಂತ್ರಿಕವಾಗಿ ಬರ ಘೋಷಣೆಯಾಗದ ಹೊರತೂ, ಜಿಲ್ಲಾಧಿಕಾರಿಗಳ ವೈಯಕ್ತಿಕ ಖಾತೆಯಲ್ಲಿರುವ ಹಣವನ್ನು ಬಳಕೆ ಮಾಡಲು ಅವಕಾಶವಾಗುವುದಿಲ್ಲ. ಹೀಗಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಜನ ಸಾಮಾನ್ಯರು ತೀವ್ರ ಸಮಸ್ಯೆ ಎದುರಿಸುವಂತಾಗಿದೆ. ಪ್ರಕೃತಿ ವಿಕೋಪ ಪರಿಸ್ಥಿತಿಗಳ ಮೇಲುಸ್ತುವರಿಗಾಗಿ ರಾಜ್ಯ ಸರ್ಕಾರ ಸಚಿವರುಗಳಿಗೆ ಜಿಲ್ಲೆಗಳನ್ನು ಹಂಚಿಕೆ ಮಾಡಿ ಜೂ.24ರಂದು ಆದೇಶ ಹೊರಡಿಸಿದೆ. ನಿಯೋಜಿತ ಸಚಿವರು ಆಯಾ ಜಿಲ್ಲೆಗಳಿಗೆ ತೆರಳಿ ಸಭೆಗಳನ್ನು ಮಾಡಬೇಕು. ಭಾದಿತ ಪ್ರದೇಶಗಳಿಗೆ ತೆರಳಿ ಪರಿಶೀಲನೆ ಮಾಡಬೇಕಿದೆ.

### ದೂರು ಹೇಳುತ್ತಾ ಕಾಲಹರಣ

**ರಾಜ್ಯ ಸರ್ಕಾರದ ಬೊಕ್ಕಸ ಖಾಲಿಯಾಗಿರುವುದರಿಂದ ಬರ ನಿರ್ವಹಣೆಗೆ ನೀಡಲು ಹಣ ಇಲ್ಲ. ಅದಕ್ಕಾಗಿಯೇ ಬರ ಘೋಷಣೆ ಮಾಡದೇ, ಕೇಂದ್ರದ ಮೇಲೆ ದೂರು ಹೇಳುತ್ತಾ ಕಾಲಹರಣ ಮಾಡಲಾಯಿತು ಎಂಬ ಆರೋಪಗಳಿವೆ.**

**ಈ ಬಾರಿ ಆ ರೀತಿಯ ಆರೋಪಗಳು ಬರಬಾರದು ಎಂಬ ಕಾರಣಕ್ಕಾಗಿಯೇ ಮುಂಜಾಗ್ರತೆಯ ಕ್ರಮವಾಗಿ ಸಚಿವರನ್ನು ಉಸ್ತುವಾರಿಗಾಗಿ ನಿಯೋಜನೆ ಮಾಡಲಾಗುತ್ತಿದೆ. ಆದರೆ ಸಚಿವರು ಈವರೆಗೂ ಮೇಲುಸ್ತುವಾರಿ ಆರಂಭಿಸದೇ ವಿಳಂಬ ಮಾಡುತ್ತಿರುವುದು ಹಲವು ಅನುಮಾನಗಳನ್ನು ಮೂಡಿಸಿದೆ.**

ಆದರೆ ಈವರೆಗೂ ಸಂಪುಟದ ಯಾವೊಬ್ಬ ಸಚಿವರೂ ಬರ ಅಥವಾ ನೆರೆ ಅಧ್ಯಯನಕ್ಕಾಗಿ ಸ್ಥಳಕ್ಕೆ ಭೇಟಿ ನೀಡಿದ್ದ ಉದಾಹರಣೆ ಇಲ್ಲ. ಸಂಪುಟ ವಿಸ್ತರಣೆಯಾಗದೆ ಪೂರ್ಣ ಪ್ರಮಾಣದಲ್ಲಿ ಸರ್ಕಾರ ರಚನೆಯಾಗಿಲ್ಲ, ಇರುವ 13 ಸಚಿವರ ಪೈಕಿ ಕೆಲವರಿಗೆ ಎರಡೆರಡು ಜಿಲ್ಲೆಗಳನ್ನು ಹಂಚಿಕೆ ಮಾಡಿದರೆ, ಇನ್ನೂ ಕೆಲವರಿಗೆ ನಾಲ್ಕು ಜಿಲ್ಲೆಗಳ ಉಸ್ತುವಾರಿಯನ್ನು ನೀಡಲಾಗಿದೆ. ಉತ್ತರ ಕರ್ನಾಟಕ ಭಾಗದ ಬಾಗಲಕೋಟೆ, ಬೀದರ್, ಬೆಳಗಾವಿ, ವಿಜಯಪುರ, ಕಲಬುರಗಿ, ರಾಯಚೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಬಿತ್ತಿದ ಬೆಳೆಗಳು ಒಣಗಿ ಹೋಗಿವೆ.

ಆಡಳಿತ ಪಕ್ಷದ ಶಾಸಕರೇ ಸರ್ಕಾರದ ವಿರುದ್ಧ ಬಹಿರಂಗ ಹೇಳಿಕೆಗಳನ್ನು ನೀಡುವ ಮೂಲಕ ಬರ ಪೀಡಿತ ತಾಲ್ಲೂಕುಗಳನ್ನು ಘೋಷಣೆ ಮಾಡಿ ಮತ್ತು ನಿರ್ವಹಣೆಗೆ ಹಣ ನೀಡಿ ಎಂದು ಒತ್ತಾಯಿಸಲಾರಂಭಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 111.68 ₹/L | ಡೀಸೆಲ್ : 99.56₹/L | ಬಂಗಾರ: ₹ 14, 302/Gram 24ct ₹13,110/Gram 22ct | ಬೆಳ್ಳಿ: ₹240.00/Gram

# ಜಿಬಿಎ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ತುರ್ತು ಸಭೆ ಯಶಸ್ವಿ

• ಉದಯವಾಹಿನಿ, ಬೆಂಗಳೂರು

ಜಿಬಿಎ ಕೇಂದ್ರ ಕಛೇರಿ ನೌಕರರ ಭವನದಲ್ಲಿ ಜಿಬಿಎ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವೃಂದ ಮತ್ತು ನೇಮಕಾತಿ ನಿಯಮಾವಳಿ ಸಿದ್ಧತೆ ಮತ್ತು ಜಿಬಿಎ -ಆಕ್ಟ್‌ನಲ್ಲಿ ಪಾಲಿಕೆ ಅಧಿಕಾರಿ, ನೌಕರರಿಗೆ ಆಗುತ್ತಿರುವ ಅನ್ಯಾಯ ಕುರಿತು ತುರ್ತು ಸಭೆ. ಜಿಬಿಎ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್‌ರವರು, ಪದಾಧಿಕಾರಿಗಳು ಹಾಗೂ ಕಂದಾಯ ಇಲಾಖೆಯ ಅಧಿಕಾರಿ, ನೌಕರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು ಮಾತನಾಡಿ ಜಿಬಿಎ ನಿಯಮಾವಳಿ ರೂಪಿಸಿ ಒಂದು ವರ್ಷವಾದರು ಇನ್ನು ಜಾರಿಗೆ ಬಂದಿಲ್ಲ. ಎ.ಶ್ರೇಣಿ ಅಧಿಕಾರಿಗಳು ಸರ್ಕಾರ, ಬಿ.ಶ್ರೇಣಿ


ಉದಯವಾಹಿನಿ ಚಿತ್ರ

ಅಧಿಕಾರಿಗಳನ್ನು ಮುಖ್ಯ ಆಯುಕ್ತರು, ಬಿ.ಮತ್ತು ಸಿ.ಅಧಿಕಾರಿ, ನೌಕರರನ್ನ ವಲಯ ಆಯುಕ್ತರು ವರ್ಗಾವಣೆ ಮಾಡಲು ಅಧಿಕಾರ ನೀಡಲಾಗಿದೆ ಅದರೆ ಜಂಟಿ ಆಯುಕ್ತರು ವರ್ಗಾವಣೆ ಮಾಡಿ ಆದೇಶ ನೀಡಿದರು ಇದರ ವಿರುದ್ಧ ನಾವು ಕೋರ್ಟ್ ಹೋಗಿ ತಡೆಯಾಜ್ಞೆ ತರಲಾಯಿತು. ವೃಂದ ಮತ್ತು ನೇಮಕಾತಿ ನಿಯಮಾವಳಿ ಸಮರ್ಪಕವಾಗಿ ಜಾರಿಗೆಯಾಗಿಲ್ಲ ಮತ್ತು ಅಧಿಕಾರಿ ಮತ್ತು ಸಿಬ್ಬಂದಿಗಳ ಕೊರತೆ ಇದೆ.

ಕಂದಾಯ ವಿಭಾಗಕ್ಕೆ ಹೊರ ಇಲಾಖೆಯಿಂದ ಮ್ಯಾನೇಜರ್ ಆಗಿ ಪಾಲಿಕೆಗೆ ಬಂದು ಎ.ಆರ್.ಓ ಹುದ್ದೆ ಬೇಕು ಎಂಬ ಒತ್ತಡ ಹಾಕುತ್ತಿದ್ದಾರೆ. ನಮ್ಮಲ್ಲಿ ಅಧಿಕಾರಿ, ಸಿಬ್ಬಂದಿಗಳು ಇದ್ದರು ಅದನ್ನ ಪರಿಗಣನೆ ಮಾಡದೇ ಬೇರೆ ಇಲಾಖೆಯಿಂದ ಬಂದವರಿಗೆ ಮಣೆ ಹಾಕುತ್ತಿದ್ದಾರೆ. ಪಂಚ ಪಾಲಿಕೆ ಅಧಿಕಾರಿ, ನೌಕರರಿಗೆ ಕೌನ್ಸಿಲಿಂಗ್ ಮುಂದಿನ ದಿನಗಳಲ್ಲಿ ಮಾಡುತ್ತಿದ್ದಾರೆ ಇದರಲ್ಲಿ ಎಲ್ಲರು ಕೇಂದ್ರ ಕಛೇರಿ ಪಾಲಿಕೆ ಬೇಕು ಎಂದು ಅಧಿಕಾರಿ, ನೌಕರರು ಮನವಿ ಸಲ್ಲಿಸಿ ಇದರಿಂದ ಪಿಂಚಣಿ, ಆರೋಗ್ಯ ಸೌಲಭ್ಯ, ಸೌವಲತ್ತು ಪಡೆಯಲು ಸುಲಭವಾಗುತ್ತದೆ ಬೇರೆ ಪಾಲಿಕೆಯಲ್ಲಿ ಈ ಸೌವಲತ್ತುಗಳು ಪಡೆಯಲು ಏಣಿಗಾಡಬೇಕು ಈ ಸಮಸ್ಯೆ ನಿವಾರಣೆಗಾಗಿ ನಮ್ಮ ಹೋರಾಟ. ಹೆಲ್ತ್ ಕಾರ್ಡ್ ಅಧಿಕಾರಿ ಮತ್ತು ನೌಕರರಿಗೆ ಬಹಳ ಮುಖ್ಯ. ಈ ಹಿಂದಿನ ವಿಶೇಷ ಆಯುಕ್ತರು ಅಧಿಕಾರಿ, ನೌಕರರಿಗೆ ಕಿರುಕುಳ ನೀಡಿದರು.

ಇದರಿಂದ ಹಲವಾರು ಸೌವಲತ್ತು, ಸೌಲಭ್ಯ ಪಡೆಯಲು ನೌಕರರು ವಂಚಿತರಾದರು. ಕೇಂದ್ರದಲ್ಲಿ ನೌಕರರಿಗೆ ಕ್ವಾರ್ಟಸ್ ಇದೆ ಅದರೆ ಬೇರೆ ಪಾಲಿಕೆ ನೌಕರರಿಗೆ ಇಲ್ಲಿ ಸಿಗಲು ಸಾಧ್ಯವಿಲ್ಲ. ಕಳೆದ ಒಂದು ವರ್ಷದಲ್ಲಿ ಬಡ್ತಿ ಸಿಗುತ್ತಿಲ್ಲ, ಕಡತಗಳು ಉನ್ನತ ಅಧಿಕಾರಿಗಳ ಬಳಿ ಹೋದರೆ ಚರ್ಚಿಸಿ, ಮಂಡಿಸಿ ಎಂದು ಬರೆದು ಕಳುಹಿಸುತ್ತಾರೆ.

ಕಡತಗಳು ಸರಿಯಾಗಿ ವಿಲೇವಾರಿಯಾಗದೇ ಹಲವಾರು ಅಧಿಕಾರಿ, ನೌಕರರು ಮುಂಬಡ್ತಿ ಸಿಗದೇ ನಿವೃತ್ತಿ ಹೊಂದಿದರು ನಮ್ಮ ಸಮಸ್ಯೆಗಳ ನಿವಾರಣೆ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಕೃಷ್ಣಬೈರೇಗೌಡರಿಗೆ ಮನವಿ ಸಲ್ಲಿಸಲಾಯಿತು ಎಂದು ಹೇಳಿದರು.

## ಬಿಜೆಪಿ ರಾಜ್ಯ ವಕ್ತಾರ ಎಂಜಿ ಮಹೇಶ್ ಉಚ್ಚಾಟನೆ

• ಉದಯವಾಹಿನಿ, ಅತ್ತಿಬೆಲೆ


ಉದಯವಾಹಿನಿ ಚಿತ್ರ

ಬಿಜೆಪಿ ರಾಜ್ಯ ಘಟಕದ ವಕ್ತಾರ ಎಂ.ಜಿ ಮಹೇಶ್ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷಗಳ ಅವಧಿಗೆ ಉಚ್ಚಾಟಿಸಲಾಗಿದೆ. ಜೂನ್ 19ರಂದು ನಡೆದ ಪಕ್ಷದ ಪ್ರಮುಖರ ಸಭೆಯಲ್ಲಿ ಬಿಜೆಪಿ ಹೈಕಮಾಂಡ್ ಮತ್ತು ರಾಜ್ಯ ನಾಯಕರ ವಿರುದ್ಧ ಅವಹೇಳನಕಾರಿ ಆರೋಪ ಮಾಡಿದ್ದ ಹಿನ್ನಲೆಯಲ್ಲಿ ಉಚ್ಚಾಟನೆ ಮಾಡಲಾಗಿದೆ. ಅವಹೇಳನಕಾರಿ ಆರೋಪ ಹಿನ್ನೆಲೆಯಲ್ಲಿ ಎಂಜಿ ಮಹೇಶ್ ಅವರಿಗೆ ರಾಜ್ಯ ಶಿಸ್ತು ಸಮಿತಿಯು ನೋಟಿಸ್ ಜಾರಿ ಮಾಡಿ ಸ್ಪಷ್ಟೀಕರಣ ಕೇಳಿತ್ತು.

ಇದೀಗ ಮಹೇಶ್ ನೀಡಿದ ಸ್ಪಷ್ಟೀಕರಣ ಸಮಂಜಸವಾಗಿಲ್ಲ ಎಂದು ತಕ್ಷಣದಿಂದ ಜಾರಿಗೆ ಬರುವಂತೆ ಅವರನ್ನು ಪಕ್ಷದ ಎಲ್ಲಾ ಜವಾಬ್ದಾರಿಗಳಿಂದ ಮುಕ್ತಗೊಳಿಸಿ, 6 ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿದೆ ಎಂದು ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜು ಪಾಟೀಲ್ ತಿಳಿಸಿದ್ದಾರೆ.

## ಶೈಕ್ಷಣಿಕ ವರ್ಷ ಆರಂಭವಾದರೂ ಇನ್ನೂ ಸಿಗದ ಪಠ್ಯಪುಸ್ತಕ: ಶಿಕ್ಷಣ ಇಲಾಖೆ ವಿರುದ್ಧ ವಿದ್ಯಾರ್ಥಿಗಳ ಆಕ್ರೋಶ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರ ಮೇ ಅಂತ್ಯದೊಳಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸುವುದಾಗಿ ಘೋಷಿಸಿದ್ದರೂ, ಕರ್ನಾಟಕದ ಸರ್ಕಾರಿ ಪದವಿಪೂರ್ವ ಕಾಲೇಜುಗಳ (ಪಿಯುಸಿ) ಸಾವಿರಾರು ವಿದ್ಯಾರ್ಥಿಗಳಿಗೆ ಇನ್ನೂ ಪುಸ್ತಕಗಳು ಲಭ್ಯವಾಗಿಲ್ಲ. ಇದರಿಂದ ಶೈಕ್ಷಣಿಕ ವರ್ಷ ಆರಂಭವಾಗಿ ಹಲವು ವಾರಗಳು ಕಳೆದರೂ ವಿದ್ಯಾರ್ಥಿಗಳು ಪಾಠ ಕಲಿಯಲು ಸಮಸ್ಯೆ ಅನುಭವಿಸುತ್ತಿದ್ದಾರೆ.

ರಾಜ್ಯ ಸರ್ಕಾರ ಇದೂವರೆಗೆ ಒಂದರಿಂದ ಹತ್ತನೇ ತರಗತಿಯವರೆಗೆ ಮಾತ್ರ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಿದೆ. ಆದರೆ, ಪಿಯುಸಿ ವಿದ್ಯಾರ್ಥಿಗಳಿಗೆ ಪುಸ್ತಕಗಳ ವಿತರಣೆ ವಿಳಂಬವಾಗಿದೆ. ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ ಕರ್ನಾಟಕ ಘಟಕದ ಪ್ರಕಾರ, ಬೆಂಗಳೂರು, ಯಾದಗಿರಿ, ಹಾಸನ, ತುಮಕೂರು, ಮೈಸೂರು, ಬಳ್ಳಾರಿ ಹಾಗೂ ರಾಯಚೂರು ಸೇರಿದಂತೆ ಕನಿಷ್ಠ ಏಳು ಜಿಲ್ಲೆಗಳ ಸರ್ಕಾರಿ ಪಿಯು ಕಾಲೇಜುಗಳಿಗೆ ಭಾಗಶಃ ಪುಸ್ತಕಗಳು ಮಾತ್ರ ತಲುಪಿವೆ. ಬಂದಿರುವ ಪುಸ್ತಕಗಳು ವಿದ್ಯಾರ್ಥಿಗಳಿಗೆ ಸಾಕಾಗುತ್ತಿಲ್ಲ ಎಂದು ಆರೋಪಿಸಿದೆ. ಅಭಿವೃದ್ಧಿ ಶಿಕ್ಷಣ ತಜ್ಞ ಪ್ರೊ. ನಿರಂಜನಾರಾಧ್ಯ ವಿ.ಪಿ. ಮಾತನಾಡಿ, ಈ ವಿಳಂಬವು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಪಿಯು ಶಿಕ್ಷಣ ಅತ್ಯಂತ ಮಹತ್ವದ ಹಂತವಾಗಿದೆ. ಶ್ರೀಮಂತ ಕುಟುಂಬಗಳ ವಿದ್ಯಾರ್ಥಿಗಳು ಖಾಸಗಿ ಸಂಪನ್ಮೂಲಗಳು, ಡಿಜಿಟಲ್ ಸಾಧನಗಳು ಮತ್ತು ಇತರ ಅಧ್ಯಯನ ಸಾಮಗ್ರಿಗಳನ್ನು ಬಳಸಿಕೊಳ್ಳಬಹುದು. ಆದರೆ ಬಡ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳೇ ಪ್ರಮುಖ ಕಲಿಕಾ ಸಾಧನ. ಆದ್ದರಿಂದ ಮುಖ್ಯಮಂತ್ರಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಹೇಳಿದ್ದಾರೆ.

## ರಾಮ ಮಂದಿರ ದೇಣಿಗೆ ವಂಚನೆ ಪ್ರಕರಣ: ನಿಷ್ಪಕ್ಷಪಾತ ತನಿಖೆಗೆ ಸಿಎಂ ಡಿ.ಕೆ. ಶಿವಕುಮಾರ್ ಆಗ್ರಹ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಅಯೋಧ್ಯೆಯ ರಾಮ ಮಂದಿರಕ್ಕೆ ಭಕ್ತರು ನೀಡಿರುವ ದೇಣಿಗೆಯ ದುರ್ಬಳಕೆ ಆರೋಪಗಳು ಅತ್ಯಂತ ಆತಂಕಕಾರಿ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದು, ಈ ಪ್ರಕರಣದಲ್ಲಿ ನ್ಯಾಯಸಮ್ಮತ, ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.ಈ ಕುರಿತು ಪ್ರಕಟಣೆ ನೀಡಿರುವ ಅವರು, ರಾಮ ಮಂದಿರಕ್ಕೆ ದೇಶದ ಕೋಟ್ಯಾಂತರ ಭಕ್ತರು ತಮ್ಮ ನಂಬಿಕೆ, ಭಕ್ತಿ ಮತ್ತು ತ್ಯಾಗದ ಸಂಕೇತವಾಗಿ ದೇಣಿಗೆ ನೀಡಿದ್ದಾರೆ. ಪ್ರತಿಯೊಂದು ರೂಪಾಯಿಯೂ ಭಕ್ತರ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ. ಆ ವಿಶ್ವಾಸಕ್ಕೆ ಧಕ್ಕೆ ಉಂಟಾಗಿದ್ದರೆ ಅದು ಕೇವಲ ಭಕ್ತರಿಗೆ ಮಾತ್ರವಲ್ಲ, ಧಾರ್ಮಿಕ ಸಂಸ್ಥೆಗಳು ಪಾಲಿಸಬೇಕಾದ ಮೌಲ್ಯಗಳಿಗೂ ಮಾಡಿದ ದ್ರೋಹವಾಗಿದೆ ಎಂದು ಹೇಳಿದ್ದಾರೆ. ದೇವಾಲಯಗಳು ಹಾಗೂ ಸಾರ್ವಜನಿಕ ದೇಣಿಗೆಗಳಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳಲ್ಲಿ ಅತ್ಯುನ್ನತ ಮಟ್ಟದ ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ಹೊಣೆಗಾರಿಕೆ ಇರಬೇಕು ಎಂದು ಅಭಿಪ್ರಾಯಪಟ್ಟರು. ಈ ಪ್ರಕರಣದಲ್ಲಿ ನ್ಯಾಯಸಮ್ಮತ, ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಯಬೇಕು. ಯಾರೇ ತಪ್ಪಿತಸ್ಥರಾಗಿದ್ದರೂ, ಅವರ ಹುದ್ದೆ ಅಥವಾ ಪ್ರಭಾವವನ್ನು ಲೆಕ್ಕಿಸದೆ ಕಾನೂನಿನ ಮುಂದೆ ಉತ್ತರದಾಯಕರನ್ನಾಗಿ ಮಾಡಬೇಕು. ಕೋಟ್ಯಂತರ ಭಕ್ತರ ವಿಶ್ವಾಸ ಮರುಸ್ಥಾಪನೆಯಾಗುತ್ತದೆ. ಧಾರ್ಮಿಕ ನಂಬಿಕೆಯನ್ನು ಖಾಸಗಿ ಲಾಭಕ್ಕಾಗಿ ದುರುಪಯೋಗಪಡಿಸಿಕೊಳ್ಳಲು ಅವಕಾಶ ನೀಡಬಾರದು ಎಂದು ತಿಳಿಸಿದ್ದಾರೆ.

## ಮೋದಿ, ಯೋಗಿ ರಾಜೀನಾಮೆಗೆ ಕಾಂಗ್ರೆಸ್ ಆಗ್ರಹ



• ಉದಯವಾಹಿನಿ, ಬೆಂಗಳೂರು

ಅಯೋಧ್ಯೆ ಶ್ರೀರಾಮ ಮಂದಿರ ಹುಂಡಿ ಹಣ ದುರುಪಯೋಗ ಪ್ರಕರಣದ ಕುರಿತು ಸಮಗ್ರ ತನಿಖೆ ಹಾಗೂ ಶ್ರೀ ರಾಮನ ಹೆಸರಿನಲ್ಲಿ ರಾಜಕೀಯ ದುರುಪಯೋಗಪಡಿಸಿಕೊಳ್ಳುತ್ತಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಶ್ರೀಯೋಗಿ ಆದಿತ್ಯನಾಥ್ ರಾಜಕೀಯ ನೈತಿಕ ಹೊಣೆಗಾರಿಕೆ ಹೊತ್ತು ರಾಜೀನಾಮೆ ನೀಡುವಂತೆ ಕಾಂಗ್ರೆಸ್ ಕಾರ್ಯಕರ್ತರು ಒತ್ತಾಯಿಸಿದ್ದಾರೆ. ಅಯೋಧ್ಯೆ ಶ್ರೀರಾಮ ಮಂದಿರದ ಹುಂಡಿ ಹಣ, ಚಿನ್ನ ಹಾಗೂ ಬೆಳ್ಳಿ ದುರುಪಯೋಗಕ್ಕೆ ಸಂಬಂಧಿಸಿದ ಪ್ರಕರಣವು ದೇಶದ ಕೋಟ್ಯಾಂತರ ಭಕ್ತರ ಭಾವನೆಗಳಿಗೆ ತೀವ್ರ ಆಘಾತ ಉಂಟುಮಾಡಿದೆ. ಶ್ರೀರಾಮನ ಭಕ್ತರು ಸಲ್ಲಿಸಿದ ದೇಣಿಗೆ ದುರುಪಯೋಗವಾಗಲು ಕಾರಣವಾದ ಆಡಳಿತಾತ್ಮಕ ವೈಫಲ್ಯಗಳಿಗೆ ಯಾರು ಹೊಣೆ?, ದೇವಸ್ಥಾನದ ಹುಂಡಿ ಹಣದ ಸುರಕ್ಷತೆಯಲ್ಲಿ ಲೋಪಗಳಾಗಿದ್ದರೆ, ಸಂಬಂಧಿತ ಸಂಸ್ಥೆಗಳು ಯಾವ ಕ್ರಮ ಕೈಗೊಂಡಿವೆ.ಪ್ರಕರಣದ ಸಂಪೂರ್ಣ ಸತ್ಯ ದೇಶದ ಜನತೆಗೆ ತಿಳಿಯುವಂತೆ ಸ್ವತಂತ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಲು ಸರ್ಕಾರ ಸಿದ್ಧವೇ? ತಪ್ಪಿತಸ್ಥರು ಯಾರೇ ಆಗಿರಲಿ, ಅವರ ವಿರುದ್ಧ ಯಾವುದೇ ರಾಜಕೀಯ ಅಥವಾ ಸಂಘಟನಾತ್ಮಕ ಪ್ರಭಾವವಿಲ್ಲದೆ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದೇ? ಎಂದು ಪ್ರಶ್ನಿಸಿದ್ದಾರೆ.

# ನೋರು ಬಾಗುಂಟೆ ಊರು ಬಾಗುಂಟುಂದಿ: ಡಾ.ಕೆ. ಸುಧಾಕರ್!

## ಬಿಜೆಪಿ ಜೆಡಿಎಸ್‌ನ ಪ್ರತಿಯೊಬ್ಬ ಕಾರ್ಯಕರ್ತರ ಪರವಾಗಿ ನಾನು ಸದಾ ದೃಢವಾಗಿ ನಿಲ್ಲುತ್ತೇನೆ

• ಉದಯವಾಹಿನಿ, ಬೆಂಗಳೂರು

ಚಿಕ್ಕಬಳ್ಳಾಪುರದಲ್ಲಿ ಶನಿವಾರ ನಡೆದ ಕೆಂಪೇಗೌಡ ಜಯಂತಿ ಆಚರಣೆ ವೇಳೆಯಲ್ಲಿ ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಚಪ್ಪಲಿ ಎಸೆತ ಪ್ರಯತ್ನವನ್ನು ಮುಖ್ಯಮಂತ್ರಿ ಡಿಕೆ ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಖಂಡಿಸಿದ್ದಾರೆ.

ಈ ಮಧ್ಯೆ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರ ಮೇಲೆ ಹಾಕಿರುವ ಕೇಸ್‌ಗಳ ವಿರುದ್ಧ ಹೋರಾಡಲು ಹೆಗಲಿಗೆ ಹೆಗಲು ಕೊಟ್ಟು ನಿಲ್ಲುತ್ತೇವೆ ಎಂದು ಸಂಸದ ಡಾ. ಕೆ. ಸುಧಾಕರ್ ಹೇಳಿದ್ದಾರೆ. ನಮ್ಮ ಕಾರ್ಯಕರ್ತರ ವಿರುದ್ಧ ದಾಖಲಿಸಲಾಗಿರುವ ಪ್ರಕರಣಗಳ ಕಾನೂನು ಹೋರಾಟಕ್ಕೆ ಅಗತ್ಯವಿರುವ ವಕೀಲರ ಸಂಪೂರ್ಣ ವೆಚ್ಚವನ್ನು ನಾನೇ ಭರಿಸುತ್ತೇನೆ. ಬಿಜೆಪಿ ಜೆಡಿಎಸ್‌ನ ಪ್ರತಿಯೊಬ್ಬ ಕಾರ್ಯಕರ್ತರ ಪರವಾಗಿ ನಾನು ಸದಾ ದೃಢವಾಗಿ ನಿಲ್ಲುತ್ತೇನೆ. ನಿಮ್ಮೊಂದಿಗಿದ್ದೇನೆ... ಮುಂದೆಯೂ ಇರುತ್ತೇನೆ ಎಂದು ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

ಇದಕ್ಕೂ ಮುನ್ನ ಟ್ವೀಟ್ ಮಾಡಿದ ಡಾ. ಸುಧಾಕರ್, ಹಿರಿಯರಾದ ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರ ಬಗ್ಗೆ ತುಚ್ಛವಾಗಿ ಮಾತನಾಡುವ ಅವಶ್ಯಕತೆ ಏನಿತ್ತು? ಎಂದು ಪ್ರಶ್ನಿಸಿದ್ದಾರೆ. ಬಾಯಿ ಸರಿ ಇದ್ದರೆ ಊರು ಸರಿಯಾಗಿರುತ್ತದೆ. ಮಾತು ಬಲ್ಲವನಿಗೆ ಜಗಳವಿಲ್ಲ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎನ್ನುವಂತೆ, ಈ ಗಾದೆಗಳು ಸಾರ್ವಕಾಲಿಕ ಸತ್ಯವನ್ನು ಸಾರುತ್ತವೆ. ಅದರಲ್ಲೂ ಸಾರ್ವಜನಿಕ ಜೀವನದಲ್ಲಿರುವವರು, ಜನರಿಂದ ಆಯ್ಕೆಯಾದ ಪ್ರತಿನಿಧಿಗಳು ತಮ್ಮ ಮಾತು ಮತ್ತು ನಡವಳಿಕೆಯಲ್ಲಿ ಸಂಯಮ ಹಾಗೂ ಸೌಜನ್ಯ ಕಾಪಾಡಿಕೊಳ್ಳುವುದು ಅತ್ಯಂತ ಅಗತ್ಯ ಎಂದಿದ್ದಾರೆ.

ರಾಜಕಾರಣದಲ್ಲಿ ಟೀಕೆ, ವಿಮರ್ಶೆ, ಆರೋಪಗಳು ಸಹಜ. ಅವಕ್ಕೆ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ತಾಳ್ಮೆಯಿಂದ, ವಾದ ಮತ್ತು ವಿಚಾರಗಳ ಮೂಲಕ ಉತ್ತರ ನೀಡುವುದು ಒಬ್ಬ ಸುಸಂಸ್ಕೃತ ನಾಯಕನ ಲಕ್ಷಣ. ಆದರೆ ಭಾಷೆಯಲ್ಲಿ ಸಂಯಮ ಕಳೆದು, ಪ್ರಚೋದನಕಾರಿ ವರ್ತನೆಗೆ ಇಳಿದಾಗ ಅದರ ದುಷ್ಪರಿಣಾಮವನ್ನು ಅನಿವಾರ್ಯವಾಗಿ ಎದುರಿಸಬೇಕಾಗುತ್ತದೆ ಎಂದು ಹೇಳಿದ್ದಾರೆ.ಚಿಕ್ಕಬಳ್ಳಾಪುರದ


ಉದಯವಾಹಿನಿ ಚಿತ್ರ

ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ನಮ್ಮ ಕಾರ್ಯಕರ್ತರೊಂದಿಗೆ ಸಭೆ ನಡೆಸಿ ಅವರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿದೆ. ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ನಡೆದ ಅಹಿತಕರ ಘಟನೆಗಳಿಗೆ ಶಾಸಕರ ಪ್ರಚೋದನಕಾರಿ ನಡೆ ಮತ್ತು ಹೇಳಿಕೆಗಳೇ ಕಾರಣವೆಂಬುದು ಸ್ಪಷ್ಟವಾಗಿದೆ.

> ನಡವಳಿಕೆಯಲ್ಲಿ ಸಂಯಮ ಹಾಗೂ ಸೌಜನ್ಯ ಕಾಪಾಡಿ

ಘಟನೆಯ ನಂತರ ಒಂದು ಕಡೆ ಅಮಾಯಕ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಿ, ಮತ್ತೊಂದು ಕಡೆ ಪರಿಸ್ಥಿತಿಯನ್ನು ಉದ್ವಿಗ್ನಗೊಳಿಸಿದವರ, ಪ್ರಚೋದನೆಗೆ ಕಾರಣರಾದವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ಪೊಲೀಸ್ ಇಲಾಖೆಯ ನಿಷ್ಪಕ್ಷಪಾತತೆ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ ಎಂದು ಆರೋಪಿಸಿದ್ದಾರೆ.

ನಮ್ಮ ಯಾವುದೇ ಅಮಾಯಕ ಕಾರ್ಯಕರ್ತನಿಗೂ ಅನ್ಯಾಯವಾಗಲು ನಾನು ಅವಕಾಶ ನೀಡುವುದಿಲ್ಲ. ಅವರ ವಿರುದ್ಧ ದಾಖಲಾಗಿರುವ ಸುಳ್ಳು ಪ್ರಕರಣಗಳ ವಿರುದ್ಧ ಕಾನೂನು ಹೋರಾಟ ನಡೆಸಲು ಅಗತ್ಯವಿರುವ ಸಂಪೂರ್ಣ ವೆಚ್ಚವನ್ನು ನಾನೇ ಭರಿಸುತ್ತೇನೆ.

### ಸರ್ಕಾರದ ವಿರುದ್ಧ ತೀವ್ರ ಹೋರಾಟ

ಪೊಲೀಸ್ ಇಲಾಖೆ ಘಟನೆಗೆ ಕಾರಣವಾದವರ ಪಾತ್ರವನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ಕಾನೂನಿನ ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ, ನಮ್ಮ ಕಾರ್ಯಕರ್ತರ ನ್ಯಾಯಯುತವಾದ ಹಕ್ಕುಗಳನ್ನು ರಕ್ಷಿಸಲು ಸರ್ಕಾರದ ವಿರುದ್ಧ ತೀವ್ರ ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

> ಜನರಿಂದ ಆಯ್ಕೆಯಾದ ಪ್ರತಿನಿಧಿಯೊಬ್ಬರು ಅಧಿಕಾರದ ಮದದಲ್ಲಿ ತೊಡೆ ತಟ್ಟುವುದು, ಮೀಸೆ ತಿರುವುವುದು, ಭುಜ ತಟ್ಟಿಕೊಳ್ಳುವಂತಹ ಪ್ರಚೋದನಕಾರಿ ವರ್ತನೆ ಪ್ರದರ್ಶಿಸುವುದು ಯಾವುದೇ ರೀತಿಯಲ್ಲೂ ಶೋಭೆ ತರುವುದಿಲ್ಲ ಎಂದಿದ್ದಾರೆ. - ಡಾ.ಕೆ. ಸುಧಾಕರ್

> ಶಾಸಕರು ನಡೆದುಕೊಂಡ ರೀತಿಯಿಂದ ಇಂದು ಇಡೀ ಚಿಕ್ಕಬಳ್ಳಾಪುರದ ಜನತೆ ತಲೆ ತಗ್ಗಿಸುವಂತಾಗಿದೆ. ಸಮಾಜವನ್ನು ಒಗ್ಗೂಡಿಸಬೇಕಾದ ಸ್ಥಾನದಲ್ಲಿರುವವರು ಜಾತಿ-ಜಾತಿಗಳ ನಡುವೆ ವೈಮನಸ್ಸು ಮೂಡಿಸುವ ಪ್ರಯತ್ನ ಮಾಡುವುದು ಅತ್ಯಂತ ದುರದೃಷ್ಟಕರ. - ಡಾ.ಕೆ. ಸುಧಾಕರ್

### ವಿಶ್ವನಾಥ್ ವಿರುದ್ಧ ಸ್ಪರ್ಧೆ ಮಾಡುವೆ

ಯಲಹಂಕ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಆರ್.ವಿಶ್ವನಾಥ್ ಅವರ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿರುವ ಸಂಸದ ಡಾ.ಕೆ. ಸುಧಾಕರ್, ವಿರುದ್ಧ ಯಲಹಂಕದಿಂದಲೂ ಸ್ಪರ್ಧಿಸಲು ಸಿದ್ಧ' ಎಂದು ಸವಾಲು ಹಾಕಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು, ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುವ ಹೇಳಿಕೆ ನೀಡಿದ್ದಾರೆ. ಅವರ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಯಾವ ಪಕ್ಷದಿಂದ ನಿಂತರೂ ಅವರನ್ನು ಎದುರಿಸುತ್ತೇನೆ. ಬಿಜೆಪಿ ಅವಕಾಶ ನೀಡಿದರೆ ಯಲಹಂಕದಿಂದಲೂ ಸ್ಪರ್ಧಿಸಿ ಅವರನ್ನು ಸೋಲಿಸಲು ಸಿದ್ಧ. ನಾನು ಪಕ್ಷದ ಕಟ್ಟಾಳು. ಅವರು ಬಯಸಿದರೆ ಪಕ್ಷೇತರವಾಗಿ ನಿಂತು ಸೆಣಸಲೂ ಅಭ್ಯಂತರವಿಲ್ಲ' ಎಂದರು.'ಯಲಹಂಕದ ಒಕ್ಕಲಿಗ ಸಮುದಾಯ ಇಲ್ಲಿಯವರೆಗೂ ಅವರ ಜತೆ ನಿಂತಿದೆ. ಸಮುದಾಯದ ಜತೆ ಗೌರವದಿಂದ ನಡೆದುಕೊಳ್ಳದಿದ್ದರೆ ಭವಿಷ್ಯದಲ್ಲಿ ಅವರೇ ಸಮಸ್ಯೆ ಎದುರಿಸುತ್ತಾರೆ. ಅಂತಹ ಗೌರವವನ್ನು ಕಳೆದುಕೊಳ್ಳಬಾರದು. ಅವರ ಅಣತಿಯಂತೆ ನಾನು ನಡೆಯಬೇಕು ಎಂದು ಅವರು ಬಯಸಿದ್ದರೆ ಅದು ತಪ್ಪು. ನಾನು ಎಂದಿಗೂ ಅವರ ಅಡಿಯಾಳಲ್ಲ' ಎಂದು ಹೇಳಿದರು.

## ಕೆಂಪೇಗೌಡರು ಒಂದು ಜಾತಿಗೆ ಸೀಮಿತರಲ್ಲ

• ಉದಯವಾಹಿನಿ, ಕೆಆರ್‌ಪುರ

ಕೆಂಪೇಗೌಡರು ಒಂದು ಜಾತಿಗೆ ಸೀಮಿತವಾಗದೆ, ಇಡೀ ಮನುಕುಲಕ್ಕೆ ಶಕ್ತಿ ತುಂಬಿದ ಮಹಾನ್ ಚೇತನಾ ಎಂದು ಶಾಸಕ ಬಿ.ಎ.ಬಸವರಾಜ ತಿಳಿಸಿದರು. ಕ್ಷೇತ್ರದ ವಿಜಿನಾಪುರದಲ್ಲಿ ಶ್ರೀ ಭುವನೇಶ್ವರಿ ಒಕ್ಕಲಿಗರ ಸಂಘ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 517 ನೇ ಜಯಂತೋತ್ಸವದಲ್ಲಿ ಅವರು ಮಾತನಾಡಿದರು. ಇಡೀ ಮನುಕುಲಕ್ಕೆ ದಾರಿದೀಪವಾದ ಮತ್ತು ಶಕ್ತಿ ತುಂಬಿದ ಕೆಂಪೇಗೌಡರನ್ನು ನಾವು ಒಂದು ಜಾತಿಗೆ ಸೀಮಿತಗೊಳಿಸಬಾರದು,

ನಗರದ ಪ್ರತಿಯೊಂದು ಜಾಗದಲ್ಲೂ ಕೆಂಪೇಗೌಡರ ಅಸ್ತಿತ್ವವಿದೆ, 7ಸಾವಿರಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಿಸಿದ ಕೀರ್ತಿ , ಮಣ್ಣಿನ ಅರಮನೆಗಳನ್ನು ನಿರ್ಮಿಸಿ ಇಸ್ಲಾಮಿಕ್ ವಾಸ್ತುಶಿಲ್ಪವನ್ನು ನಾಚಿಸುವಂತೆ ನಿರ್ಮಾಣ ಮಾಡಿದ್ದು ಕೂಡಾ ಕೆಂಪೇಗೌಡರ ಚಾಣಾಕ್ಷತನಕ್ಕೆ ಸಾಕ್ಷಿ ಎಂದರು

ಪ್ರತಿ ಮನೆಯಲ್ಲಿ ಮಕ್ಕಳಿಗೆ ನಾಡಿನ ಮಹನೀಯರ ಸಾಧನೆ, ಜೀವನವನ್ನು ತಿಳಿಸಿಕೊಡಬೇಕು, ಮುಂದಿನ ಪೀಳಿಗೆಗೂ ಮಹಾತ್ಮರನ್ನು ಕೊಂಡೊಯ್ಯಬೇಕು, ಸೂರ್ಯ ಚಂದ್ರ ಇರುವವರಿಗೂ ಅವರನ್ನು ಜೀವಂತವಾಗಿರಿಸಬೇಕು ಎಂದು ತಿಳಿಸಿದರು

ದೂರವಾಣಿನಗರ ಬಿಜೆಪಿ ಮುಖಂಡ ಪ್ರದೀಪ್ ಗೌಡ ಮಾತನಾಡಿ, ದೇಶದ ಇತರ ಭಾಗಗಳಿಗೆ ಹೋಲಿಸಿದರೆ, ನಮ್ಮ ಬೆಂಗಳೂರಿನಲ್ಲಿ ಯಾವಾಗಲೂ ಅನುಕೂಲಕರ ವಾತಾವರಣ ಇರುತ್ತದೆ. ಇದಕ್ಕೆ ಮೂಲ ಕಾರಣ ದೂರದೃಷ್ಟಿ ಇಟ್ಟುಕೊಂಡು ನಾಡಪ್ರಭು ಶ್ರೀ ಕೆಂಪೇಗೌಡರು ಬೆಂಗಳೂರು


ಉದಯವಾಹಿನಿ ಚಿತ್ರ

ನಗರವನ್ನು ಕಟ್ಟಿದ್ದು. ಅಂದು ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಗೋಪುರವನ್ನು ಕಟ್ಟಿ ನಗರವನ್ನು ಕಟ್ಟಿದ್ದರು. ಎಲ್ಲಾ ಸಮಾಜದವರಿಗೂ ಹಾಗೂ ವ್ಯಾಪಾರದ ದೃಷ್ಟಿಯಿಂದ ಎಲ್ಲಾ ಪೇಟೆಗಳನ್ನು ನಿರ್ಮಿಸಿದ್ದರು, ಉತ್ತಮ ಪರಿಸರ ಹಾಗೂ ಜನ ಜೀವನಕ್ಕಾಗಿ ಅಂದಿನ ಕಾಲದಲ್ಲಿಯೆ ಕೆರೆಗಳನ್ನು ಅಭಿವೃದ್ಧಿಪಡೆಸಿದವರು.

ಆದರೆ ಇಂದು ಆ ಗಡಿಯನ್ನು ಮೀರಿ ನಗರ ಬೆಳೆದಿದೆ ಎಂದರು. ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಮುನೇಗೌಡ, ದೂರವಾಣಿನಗರ ವಾರ್ಡ್ ಬಿಜೆಪಿ ಆಕಾಂಕ್ಷಿ ಪ್ರದೀಪ್ ಗೌಡ, ಎಸ್.ಎಲ್.ವಿ.ಶೇಖರ್, ಮುನಿರಾಜು, ರಮೇಶ್ ಗೌಡ ಇದ್ದರು.

## 10 ಬಿಲಿಯನ್ ಡಾಲರ್ ದ್ವಿಪಕ್ಷೀಯ ವ್ಯಾಪಾರ ವೃದ್ಧಿಗೆ ಮುನ್ನುಡಿ: ಐತಿಹಾಸಿಕ 'ಸಿಸ್ಟರ್-ಸಿಟಿ' ಒಪ್ಪಂದಕ್ಕೆ ರಾಜ್ಯ ಸರ್ಕಾರ ಮುಂದು:ಡಾ.ಜಿ. ಪರಮೇಶ್ವರ್!

• ಉದಯವಾಹಿನಿ, ಬೆಂಗಳೂರು

ಪೆರು ಗಣರಾಜ್ಯದೊಂದಿಗಿನ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ, ಪೆರು ದೇಶದ ರಾಜಧಾನಿ 'ಲಿಮಾ' ನಂತಹ ಪ್ರಮುಖ ನಗರ ಹಾಗೂ 'ಬೆಂಗಳೂರು' ನಗರದ ನಡುವೆ ಐತಿಹಾಸಿಕ 'ಸಿಸ್ಟರ್-ಸಿಟಿ' ಒಪ್ಪಂದ ಮಾಡಿಕೊಳ್ಳಲು ಕರ್ನಾಟಕ ಸರ್ಕಾರ ಅತ್ಯಂತ ಉತ್ಸುಕವಾಗಿದೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಸೋಮವಾರ ತಿಳಿಸಿದ್ದಾರೆ.

ಭಾರತ ಮತ್ತು ಪೆರು ನಡುವಿನ 63 ವರ್ಷಗಳ ನಿರಂತರ ರಾಜತಾಂತ್ರಿಕ ಬಾಂಧವ್ಯ ಹಾಗೂ ಪೆರು ಗಣರಾಜ್ಯದ '205ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ಉನ್ನತ ಮಟ್ಟದ ರಾಜತಾಂತ್ರಿಕ ಸಮಾರಂಭದಲ್ಲಿ ಮಾತನಾಡಿದ ಅವರು, ಪೆರುವಿನ ಲ್ಯಾಟಿನ್ ಅಮೆರಿಕನ್ ವಿಮೋಚನಾ



ಉದಯವಾಹಿನಿ ಚಿತ್ರ

ಚಳುವಳಿಗಳು ಮತ್ತು ಮಹಾತ್ಮ ಗಾಂಧಿಯವರ ನೇತೃತ್ವದ ಭಾರತದ ಸ್ವಾತಂತ್ರ್ಯ ಹೋರಾಟದ ನಡುವಿನ ಆಳವಾದ ಸಾಮ್ಯತೆಗಳನ್ನು ಸ್ಮರಿಸಿದರು.

ಭಾರತದ ಐಟಿ ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ಜೈವಿಕ ತಂತ್ರಜ್ಞಾನ ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯವು ಶೇ.40 ಕ್ಕಿಂತ ಹೆಚ್ಚಿನ ಪಾಲನ್ನು ಹೊಂದುವ ಮೂಲಕ ಪ್ರಥಮ ಸ್ಥಾನದಲ್ಲಿದ್ದು, ಈ ಕ್ಷೇತ್ರದಲ್ಲಿ ಇಡೀ ದೇಶವನ್ನೇ ಮುನ್ನಡೆಸುತ್ತಿದೆ. ಇತ್ತೀಚೆಗೆ ರಾಜ್ಯದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ಅಭೂತಪೂರ್ವ ಯಶಸ್ಸು ಮತ್ತು ಅಲ್ಲಿ ಹರಿದುಬಂದ ಬೃಹತ್ ಹೂಡಿಕೆಗಳು ರಾಜ್ಯದ ಪ್ರಗತಿಯನ್ನು ಮತ್ತಷ್ಟು ಸಾಬೀತುಪಡಿಸಿವೆ.

> ಬೆಂಗಳೂರು ಮತ್ತು ಪೆರು ದೇಶದ ಪ್ರಮುಖ ನಗರದ ನಡುವೆ ವ್ಯಾಪಾರ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ನೇರ ಸಾಂಸ್ಥಿಕ ಸಹಯೋಗವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಸಿಸ್ಟರ್-ಸಿಟಿ ಒಪ್ಪಂದವು ಅತ್ಯಂತ ಮಹತ್ವದ್ದಾಗಿದೆ. ಇದು ಭವಿಷ್ಯದಲ್ಲಿ ಉಭಯ ದೇಶಗಳ ನಡುವಿನ 10 ಬಿಲಿಯನ್ ಡಾಲರ್ ದ್ವಿಪಕ್ಷೀಯ ವ್ಯಾಪಾರ ವೃದ್ಧಿಗೆ ದೊಡ್ಡ ಮುನ್ನುಡಿಯಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.- ಡಾ.ಜಿ. ಪರಮೇಶ್ವರ್

ಇಂದು ಭಾನುವಾರ ಶೇಷಾದ್ರಿಪುರಂ ದತ್ತಿ ಸಭಾಂಗಣದಲ್ಲಿ ಶ್ರೀಬುದ್ಧ ಬಸವ ಗಾಂಧಿ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ಸಾಹಿತ್ಯ, ಸಾಂಸ್ಕೃತಿಕ ಸೇವೆಯನ್ನು ಗುರುತಿಸಿ ಚನ್ನೇಗೌಡ ಉಜ್ಜನಿ ಚಲುವಯ್ಯರವರಿಗೆ ಶ್ರೀಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ ಪುರಸ್ಕಾರವನ್ನು ಪ್ರಜಾವಾಣಿ ಸಂಪಾದಕರು, ಸಾಹಿತಿಗಳು, ಗೌರವಾನ್ವಿತರು ಹಾಗೂ ಇನ್ನೂ ಹಲವಾರು ಗಣ್ಯರ ಸಮ್ಮುಖದಲ್ಲಿ ಸಿಕ್ಕಿರುವುದು ಕ್ಷೇತ್ರದ ಪೂಜ್ಯರು, ಗುರು ಹಿರಿಯರ ಆಶೀರ್ವಾದದಿಂದ ಎಂದು ಹೇಳಲು ಹರ್ಷವಿದೆ.



ಉದಯವಾಹಿನಿ ಚಿತ್ರ

# ಸಂಪುಟ ಸಂಕಟ: ಕೈ ನಾಯಕರ ಪರದಾಟ

## 20 ಸ್ಥಾನಗಳಿಗೆ ಸುಮಾರು 42ಕ್ಕೂ ಹೆಚ್ಚು ಮಂದಿ ಪ್ರಬಲ ಆಕಾಂಕ್ಷಿಗಳಿದ್ದಾರೆ. ಇವರಲ್ಲಿ ಯಾರಿಗೆ ನೀಡಬೇಕು.

• ಉದಯವಾಹಿನಿ, ಬೆಂಗಳೂರು

ಸಿಎಂ ಡಿ.ಕೆ. ಶಿವಕುಮಾರ್ ನಾಯಕತ್ವದ ಸರಕಾರ ಅಸ್ತಿತ್ವಕ್ಕೆ ಬಂದು ತಿಂಗಳು ಸಮೀಪಿಸುತ್ತಿದ್ದು, ಬಹು ನಿರೀಕ್ಷಿತ ಸಂಪುಟ ವಿಸ್ತರಣೆ ಬಗ್ಗೆ ತೀವ್ರ ಒತ್ತಡ ಶುರುವಾಗಿದೆ. ಮುಖ್ಯಮಂತ್ರಿ ಡಿಕೆಶಿ ಸೇರಿದಂತೆ ಸದ್ಯ 13 ಮಂತ್ರಿ ಗಳು ಸರಕಾರವನ್ನು ಮುನ್ನಡೆಸುತ್ತಿದ್ದು, ಉಳಿದ 20 ಮಂತ್ರಿಸ್ಥಾನಕ್ಕಾಗಿ ಸಂಪುಟ ವಿಸ್ತರಣೆ ಅನಿವಾರ್ಯವಾಗಿದೆ. ಇದರ ಒತ್ತಡದಲ್ಲಿ ಪಕ್ಷದ ವರಿಷ್ಠರು ಹಾಗೂ ರಾಜ್ಯ ನಾಯಕರು ಪರದಾಡುತ್ತಿದ್ದು, ಸವಾಲುಗಳನ್ನೂ ಅವರು ಎದುರಿಸುತ್ತಿದ್ದಾರೆ.

20 ಸ್ಥಾನಗಳಿಗೆ ಸುಮಾರು 42ಕ್ಕೂ ಹೆಚ್ಚು ಮಂದಿ ಪ್ರಬಲ ಆಕಾಂಕ್ಷಿಗಳಿದ್ದಾರೆ. ಇವರಲ್ಲಿ ಯಾರಿಗೆ ನೀಡಬೇಕು. ಯಾರನ್ನು ಕೈ ಬಿಡಬೇಕೆನ್ನುವ ಗೊಂದಲ ಪಕ್ಷದ ವರಿಷ್ಠರದ್ದಾಗಿದೆ. ಈ ಮಧ್ಯೆ ಪಕ್ಷದ ವರಿಷ್ಠರಾದ ರಾಹುಲ್ ಗಾಂಧಿ ಅವರು ವಿದೇಶ ಪ್ರವಾಸದಿಂದ ಬಂದ ನಂತರ ರಾಜ್ಯ ನಾಯಕ ರನ್ನು ಕರೆಸಿ ಮಾತುಕತೆ ನಡೆಸಿ ನಂತರವಷ್ಟೇ ಸಂಪುಟ ವಿಸ್ತರಣೆ ಮಾಡುವ ಸಾಧ್ಯತೆ ಇದೆ. ಆದರೆ ಅದಕ್ಕೆ ಯಾವುದೇ ದಿನವಾಗಲಿ, ಸಮಯವಾಗಲಿ ನಿಗದಿಯಾಗದಿರುವ ಕಾರಣ ಅನೇಕ ಆಕಾಂಕ್ಷಿಗಳಲ್ಲಿ ಆತಂಕ ಶುರುವಾಗಿದೆ, ಜತೆಗೆ ಕೆಲವರಲ್ಲಿ ಮಂತ್ರಿಯಾಗುವ ಆಸೆಯೇ ಕಮರಿ ಹೋಗುತ್ತಿದೆ. ಸಂಪುಟ ವಿಸ್ತರಣೆ ಮಾಡಿ ಪೂರ್ಣ ಪ್ರಮಾಣದ ಆಡಳಿತ ಮುನ್ನಡೆಸಬೇಕಾದ ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರು ಈ ವಿಚಾರದಲ್ಲಿ ಎದುರಾಗುವ ಸವಾಲುಗಳಿಂದ ಮಂಕಾಗಿದ್ದಾರೆ.

ಸಂಪುಟ ವಿಸ್ತರಣೆ ಎಂದಾಗ ಪಕ್ಷದಲ್ಲಿ 45 ವರ್ಷಕ್ಕೂ ಹೆಚ್ಚು ಕಾಲ ದುಡಿದ ಪಕ್ಷ ನಿಷ್ಠರಿಗೆ ಆದ್ಯತೆ ನೀಡಬೇಕು. ಜಾತಿ, ಧರ್ಮಗಳ ಲೆಕ್ಕಾಚಾರದಲ್ಲಿ ಅವಕಾಶ ಕೊಡಬೇಕು. ಹಿರಿಯರು, ಕಿರಿಯರು ಹಾಗೂ ಪ್ರಾದೇಶಿಕತೆ ಮತ್ತು ಜಿಲ್ಲಾವಾರು ಪ್ರಾತಿನಿಧ್ಯಗಳನ್ನು ನೀಡಬೇಕಾದ ಪೀಕಲಾಟ ವರಿಷ್ಠರಿಗೆ ಶುರುವಾಗಿದೆ. ಇದೆಲ್ಲದರ ಮಧ್ಯೆ ತಮ್ಮ ಬೆಂಬಲಿಗರಿಗೆ ಮಂತ್ರಿ ಸ್ಥಾನ ದೊರಕಿಸುವ ನಿಟ್ಟಿನಲ್ಲಿ ರಾಜ್ಯ ಹಾಗೂ ಕೆಲವು ಕೇಂದ್ರ ನಾಯಕರೂ ತೀವ್ರ ಒತ್ತಡಕ್ಕೆ ಸಿಲುಕಿದ್ದಾರೆ ಎನ್ನಲಾಗಿದೆ.


ಉದಯವಾಹಿನಿ ಚಿತ್ರ



ಪರಿಶಿಷ್ಟ ಪಂಗಡದಲ್ಲಿ ಪಕ್ಷದ ಅಧ್ಯಕ್ಷ ಸ್ಥಾನ ಕೈ ತಪ್ಪಿರುವ ಕಾರಣ ಆ ಸಮುದಾಯದ ನಾಯಕರು ಬೇಸರದಲ್ಲಿದ್ದಾರೆ ಎಂದು ಹೇಳಲಾಗಿದೆ, ಅಲ್ಲದೆ ಈ ಹಿಂದೆ ರಾಜೀನಾಮೆ ಸಲ್ಲಿಸಿದ್ದ ಕೆ.ಎನ್. ರಾಜಣ್ಣ ಹಾಗೂ ನಾಗೇಂದ್ರ ಅವರ ಸ್ಥಾನಗಳು ಖಾಲಿ ಇರುವ ಕಾರಣ ಸಂಸದ ತುಕಾರಾಮ್ ಪತ್ನಿ ಅನ್ನಪೂರ್ಣ ಹಾಗೂ ಚಳ್ಳಕೆರೆಯ ರಘುಮೂರ್ತಿ ಅವರಿಗೆ ಅವಕಾಶ ನೀಡುವ ಸಾಧ್ಯತೆ ಇದೆ. ಇದೆಲ್ಲದರ ಜತೆಗೆ ಹಿಂದುಳಿದ ವರ್ಗದ ಪೈಕಿ ಯತೀಂದ್ರ ಸಿದ್ದರಾಮಯ್ಯ ಹಾಗೂ ಭೈರತಿ ಸುರೇಶ್ ಅವರು ಮಂತ್ರಿಯಾಗಿರುವ ಕಾರಣ ಇತರ ಆ ಸಮುದಾಯದವರ ಪೈಕಿ ಪುಟ್ಟರಂಗ ಶೆಟ್ಟಿ, ಮಧು ಬಂಗಾರಪ್ಪ, ಸಂತೋಷ್ ಲಾಡ್ (ಮರಾಠ), ಬಿ.ಜಿ. ಗೋವಿಂದಪ್ಪ ಮೊಗೇರ ಸಮುದಾಯದ ಮಂಕಾಳ ವೈದ್ಯ ಅವರಿಗೆ ಅವಕಾಶ ಲಭಿಸುವ ಸಂಭವ ಹೆಚ್ಚು ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ. ಸಂಪುಟದಲ್ಲಿ ಅಲ್ಪಸಂಖ್ಯಾತರ ಪೈಕಿ ಒಬ್ಬರಿಗೆ ಅವಕಾಶ ನೀಡುವ ಸಾಧ್ಯತೆ ಕಾಣುತ್ತಿದ್ದು, ಇದಕ್ಕಾಗಿ ತನ್ವೀರ್ ಸೇಠ್ ಹಾಗೂ ಎನ್.ಎ.ಹ್ಯಾರೀಸ್ ಅವರಲ್ಲಿ ಯಾರಿಗಾದರೂ ಅವಕಾಶ ನೀಡಬಹುದು ಎನ್ನಲಾಗುತ್ತಿದೆ.

### ಜಿಲ್ಲೆಗಳಿಗೆ ಆದ್ಯತೆ ಸಿಕ್ಕಿಲ್ಲ

ಈಗಾಗಲೇ ಸಂಪುಟದಲ್ಲಿರುವ ಪ್ರಬಲ ಸಮುದಾಯಗಳಿಗೆ ಅವಕಾಶ ಸಿಕ್ಕಿದ್ದು, ಬಹುತೇಕ ಹಿಂದುಳಿದ ಜಾತಿ, ಧರ್ಮ ಹಾಗೂ ಜಿಲ್ಲೆಗಳಿಗೆ ಆದ್ಯತೆ ಸಿಕ್ಕಿಲ್ಲ, ಜತೆಗೆ ಸರಕಾರದ ಅವಧಿ ಕೂಡ ಕಡಿಮೆ ಇರುವ ಕಾರಣ ಆಕಾಂಕ್ಷಿಗಳಲ್ಲಿ ಒಳಗೊಳಗೇ ಅಸಮಾಧಾನ ಹೊಗೆಯಾಡುತ್ತಿದ್ದು,. ಇದನ್ನು ಅವರು ತಮ್ಮ ಸಮುದಾಯದ ಸಂಘಟನೆಗಳು ಮತ್ತು ಸ್ವಾಮೀಜಿಗಳ ಮೂಲಕ ವ್ಯಕ್ತವಾಗುವಂತೆ ಮಾಡುತ್ತಿದ್ದಾರೆ ಎನ್ನಲಾಗಿದೆ.

> ಈ ಮಧ್ಯೆ ರಾಜ್ಯದಲ್ಲಿ ಎದುರಾಗಿರುವ ಮಳೆ ಕೊರತೆ, ಗ್ಯಾರಂಟಿ ಯೋಜನೆಗಳಿಗೆ ಕಡಿವಾಣ, ವರ್ಗಾವಣೆ ಹಾಗೂ ಬಿಡದಿ ಹೋರಾಟ ಸೇರಿದಂತೆ ಅನೇಕ ಸಮಸ್ಯೆಗಳಿಗೆ ಸಚಿವರ ಉಪಸ್ಥಿತಿ ಅನಿವಾರ್ಯತೆ ಎದ್ದು ಕಾಣುತ್ತಿದ್ದು, ಸಂಪುಟ ವಿಸ್ತರಣೆ ಒತ್ತಡ ದಿನದಿನಕ್ಕೂ ಹೆಚ್ಚಾಗಿದೆ ಎಂದು ಪಕ್ಷದ ಹಿರಿಯ ನಾಯಕರು ಹೇಳಿದ್ದಾರೆ.

# ವಿಕಲಚೇತನರ ಪುನಶ್ಚೇತನಕ್ಕೆ ಶ್ರಮಿಸುವ ಸಂಸ್ಥೆ ಮಾರ್ಗದರ್ಶಿ ಸಂಸ್ಥೆಯಾಗಿದೆ: ಗೀತಾಮೃತ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಾಮರಾಜನಗರ

ವಿಕಲಚೇತನರ ಪುನಶ್ಚೇತನಕ್ಕೆ ಶ್ರಮಿಸುವ ಸಂಸ್ಥೆ ಮಾರ್ಗದರ್ಶಿ ಸಂಸ್ಥೆಯಾಗಿದೆ ಎಂದು ಮಾರ್ಗದರ್ಶಿ ಸಂಸ್ಥೆಯ ಜಂಟಿ ಕಾರ್ಯದರ್ಶಿ ಕೆ.ಎಂ.ಗೀತಾಮೃತ ತಿಳಿಸಿದರು. ಆರೋಗ್ಯಸಲಹೆಗಳು ನಗರದ ಫಾರೇಸ್ಟ್ ನರಸರಿ ರಸ್ತೆಯಲ್ಲಿ ಇರುವ ಕಛೇರಿಯಲ್ಲಿ ವಿಕಲಚೇತನ ಮಕ್ಕಳಿಗಾಗಿ ಆರಂಭಿಕ ಚಿಕಿತ್ಸಾ ಕೇಂದ್ರದ ಲೋಕಾರ್ಪಣೆ ಸಮಾರಂಭವನ್ನು ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಸಂಸ್ಥೆಯು ಪ್ರಾರಂಭವಾಗಿ ಸುಮಾರು 16 ವರ್ಷಗಳು ಕಳೆದಿದೆ. ಈ ಸಂಸ್ಥೆಯಿಂದ ವಿಕಲಚೇತನರಾಗಿ ಮನೆಯಲ್ಲಿ ಇರುತ್ತಿದ್ದ ಮಕ್ಕಳಿಗೆ ವ್ಯಾಯಾಮ, ಹಾಗೂ ಆಟೋಟಗಳನ್ನು ಹಾಡಿ ಅವರ ಮನ್ನಸನ್ನು ಶುದ್ಧಗೊಳಿಸಲು ಈ ಸಂಸ್ಥೆಯು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಅಂಗವೈಪಲ್ಯ ಇರುವವರು ನನ್ನ ಕೈಯಲ್ಲಿ ಎನ್ನನು ಸಾಧಿಸಲು ಸಾಧ್ಯವಿಲ್ಲ ಎಂದುಕೊಳ್ಳಬಾರದು. ಅವರ ವೈಪಲ್ಯ ಅಂಗಗಳನ್ನು ಪಿಜಿಯೋಥೆರೇಪಿಯಲ್ಲಿ ಸ್ವಲ್ಪ ಮಟ್ಟಿಗಾದರು ಗುಣಪಡಿಸಬಹುದು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷೆ ವಿ.ವಿ.ಶಾಂತಲಕ್ಷ್ಮಿ ಮಾತನಾಡಿ, ಯಾವುದೇ ಸಂಸ್ಥೆಗಳು ನಡೆಸಬೇಕಾದರೆ ದಾನಿಗಳು ಮುಂದೆಬರಬೇಕು. ಮಾರ್ಗದರ್ಶಿ ಸಂಸ್ಥೆಗೆ ಬೆಂಗಳೂರಿನ ನಿವೃತ್ತ ಬ್ಯಾಂಕ್ ಉದ್ಯೋಗಿಗಳು ಹಲವಾರು ರೀತಿಯಲ್ಲಿ ಇಷ್ಟು ಎತ್ತರಕ್ಕೆ ಬೆಳೆಯಲು ಅವರ ಕೊಡುಗೆ ಬಹಳಷ್ಟಿದೆ, ಪ್ರತಿ ತಿಂಗಳು ವಿಕಲಚೇತನರ ಕುಟುಂಬಕ್ಕೆ ಧೈರ್ಯ ತುಂಬುವ ದೃಷ್ಟಿಯಿಂದ ಚಾಮರಾಜನಗರ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಬಡ ಕುಟುಂಬಕ್ಕೆ ಹಸು ಮತ್ತು ಕರುಗಳನ್ನು ದಾನವಾಗಿ ನೀಡುತ್ತಬಂದಿದೆ. ಇದುವರೆಗೆ ಜಿಲ್ಲೆಯ 97 ಕುಟುಂಬಗಳಿಗೆ ನೀಡಲಾಗಿದೆ. ಎಷ್ಟೋ ವಿಕಲಚೇತನ ಮಕ್ಕಳಿಗೆ ಪಿಜಿಯೋಥೆರೆಪಿಯನ್ನು ಮಾಡಿಕೊಳ್ಳಲು ಕಷ್ಟವಾಗಿದೆ. ಅಂತಹ ಮಕ್ಕಳನ್ನು ಗುರುತಿಸಿ ನಮ್ಮ ಸಂಸ್ಥೆಯ ವತಿಯಿಂದ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಚಿಕಿತ್ಸೆ ಪಡೆದ ಹಲವಾರು ಮಕ್ಕಳು ಗುಣಮುಖರಾಗಿದ್ದಾರೆ ಇದರ ಸದುಪಯೋಗವನ್ನು ವಿಕಲಚೇತನರು ಪಡೆದುಕೊಳ್ಳಬೇಕು ಎಂದರು.

> **ವಿಕಲಚೇತನ ಮಕ್ಕಳಿಗೆ ಆಟಗಳನ್ನು ಹಾಡಿಸುವ ಮತ್ತು ವ್ಯಾಯಾಮಗಳನ್ನು ಮಾಡುವುದನ್ನು ಕಲಿಸಿಕೊಡುವುದರ ಜೊತೆಗೆ ಜನಗಳ ಜೊತೆ ಬೆರೆತು ಮಾತುಗಳನ್ನು ಹಾಡುವುದನ್ನು ಕಲಿಸುತ್ತಿದೆ. ದಾನಿಗಳ ಸಹಾಯದಿಂದ ಮಕ್ಕಳಿಗೆ ಬೇಕಾಗುವ ಉಪಕರಣಗಳನ್ನು ಮಾರ್ಗದರ್ಶಿ ಸಂಸ್ಥೆಗೆ ನೀಡಿದ್ದಾರೆ. ಮುಂದೆ ಮಕ್ಕಳನ್ನು ಕರೆತರಲು ವಾಹನ ಸೌಲಭ್ಯವನ್ನು ಕಲ್ಪಿಸಲಾಗುವುದು .–ಗೀತಾಮೃತ**

## ಎಸ್‌ಸಿ-ಎಸ್‌ಟಿ ವಿದ್ಯಾರ್ಥಿಗಳಿ ಪ್ರೋತ್ಸಾಹ ಧನ ವಿತರಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಕ್ಕಬಳ್ಳಾಪುರ

ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಭಾರತ ದೇಶದ ಮುಂದಿನ ಭವಿಷ್ಯತ್ತು ಇಂದಿನ ವಿದ್ಯಾರ್ಥಿಗಳ ಶ್ರಮದಲ್ಲಿ ಇದೆ. ಇಂದಿನ ವಿದ್ಯಾರ್ಥಿಗಳು ಹಾಗೂ ಯುವ ಜನಾಂಗ ಪ್ರಾಮಾಣಿಕತೆ ಹಾಗೂ ಪರಿಶ್ರಮದಿಂದ ದೇಶ ಕಟ್ಟುವ ಕೆಲಸ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ ತಿಳಿಸಿದರು.

ನಗರದ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ಶ್ರೀ ಭಗತ್ ಸಿಂಗ್ ಚಾರಟ್ಟಬಲ್ ಟ್ರಸ್ಟ್ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಸ್ಪಂದನ ವಿದ್ಯಾರ್ಥಿ ಪ್ರೋತ್ಸಾಹ ಧನ ವಿತರಣೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಯಾವುದೇ ರೀತಿಯ ಹಿಂಜರಿಕೆಯನ್ನು ಹೊಂದಬಾರದು.

ಅವರು ಅತ್ಯಂತ ಕಠಿಣ ಪರಿಶ್ರಮದಿಂದ ವಿದ್ಯಾರ್ಜನೆ ಮಾಡಿ ಉತ್ತಮ ಫಲಿತಾಂಶದೊಂದಿಗೆ ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಯು ಸಮಾಜದಲ್ಲಿ ಮುಂದಿನ ಜೀವನದಲ್ಲಿ ಗೌರವಹಿತವಾಗಿ ಜೀವನ ನಡೆಸಬೇಕಾದರೆ ಅವರಿಗೆ ಶೈಕ್ಷಣಿಕ ಅರಿವು ಅತ್ಯಂತ ಮುಖ್ಯವಾದದ್ದಾಗಿದೆ ಯಾರಿಂದಲೂ ಕದಿಯಲಾಗದ ಯಾವುದಾದರೂ ಒಂದು ಸಂಪತ್ತು ಇದ್ದರೆ ಅದು ವಿದ್ಯೆ ಎಂದು ವಿದ್ಯೆಯ ಮಹತ್ವವನ್ನು ತಿಳಿಸಿದರು.

# ರೈತರಿಗೆ ಬೆಳೆ ಬೆಳೆಯಲು ಸಲಹೆ ನೀಡಿ

### ಅರಣ್ಯ ಇಲಾಖೆ ಅವರು ಅಗ್ನಿ ಅವಘಡಗಳಿಗೆ ಸಂಬಂಧಿಸಿದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿಬೇಕು

• ಉದಯವಾಹಿನಿ, ಮೈಸೂರು



ಜಿಲ್ಲೆಯಲ್ಲಿ ಪೂರ್ವ ಮುಂಗಾರಿನಲ್ಲಿ ಮಳೆಯ ಕೊರತೆಯಾಗಿದ್ದು, ಮುಂದಿನ ದಿನಗಳಲ್ಲಿ ರೈತರಿಗೆ ಹವಾಮಾನ/ ಮಳೆಯ ಆಧಾರದ ಮೇಲೆ ಬೆಳೆ ಬೆಳೆಯಲು ಸಲಹೆ ನೀಡುವಂತೆ ನಗರಾಭಿವೃದ್ಧಿ ಹಾಗೂ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಪ್ರಕೃತಿ ವಿಕೋಪ ಮೇಲುಸ್ತುವಾರಿ ಸಚಿವ ಡಾ; ಯತೀಂದ್ರ ಸಿದ್ದರಾಮಯ್ಯ ಅವರು ತಿಳಿಸಿದರು. ಸುದ್ದಿಪೋರ್ಟಲ್ ಅವರು ಇಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕುಡಿಯುವ ನೀರು ಹಾಗೂ ಮುಂಗಾರು ಬಿತ್ತನೆಯ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದರು.

ಮುಂದಿನ ಮಾಹೆಗಳಲ್ಲಿ ಮಳೆಯ ಕೊರತೆ ಉಂಟಾಗುವ ಸಾಧ್ಯತೆ ಇದ್ದು, ರೈತರು ನೀರಿನ ಬೇಡಿಕೆ ಹೆಚ್ಚಿರುವ ಬೆಳೆಗಳನ್ನು ಬೆಳೆಯದೇ, ಕಡಿಮೆ ನೀರಿನಲ್ಲಿ ಬೆಳೆಯಬಹುದಾದ ಜೋಳ, ರಾಗಿ, ಕಾಳುಗಳನ್ನು ಬೆಳೆಯಲು ಪೊರೀತ್ಸಾಹಿಸಿ ಜಾಗೃತಿ ಮೂಡಿಸುವಂತೆ ತಿಳಿಸಿದರು. ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ ಭಾಗದಲ್ಲಿ ಬೆಳೆದಿರುವ ಜೋಳದ ಬೆಳೆಯಲ್ಲಿ ಬಿಳಿಸುಳಿ ರೋಗ ಕಂಡುಬಂದಿದ್ದು, ಇದಕ್ಕೆ ನೀಡಬೇಕಿರುವ ಔಷಧೋಪಚಾರ ಕುರಿತು ಹಾಗೂ ಬೆಳೆ ಪರಿವರ್ತನೆ ಕುರಿತು ಜಾಗೃತಿ ಮೂಡಿಸಿ ಎಂದರು. ಮಳೆಯ ಕೊರತೆಯ ಹಿನ್ನಲೆಯಲ್ಲಿ ಹೊಸ ಬೋರ್‌ವೆಲ್ ಗಳು ಕೊರೆಯುವ, ನೀರಿನ ಪೈಪ್ ಲೈನ್ ಕಾಮಗಾರಿಗಳು ನಡೆಯುತ್ತದೆ. ಈ ಸಂದರ್ಭದಲ್ಲಿ ಅರಣ್ಯ ಇಲಾಖೆ ಅವರು ವಿಳಂಬ ಮಾಡದೇ ನಿಯಮಾನುಸಾರ ಅನುಮತಿ ನೀಡಬೇಕು. ಅಗ್ನಿಶಾಮಕ ಇಲಾಖೆ ಹಾಗೂ ಅರಣ್ಯ ಇಲಾಖೆ ಅವರು ಅಗ್ನಿ ಅವಘಡಗಳಿಗೆ ಸಂಬಂಧಿಸಿದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿಬೇಕು ಎಂದರು.

ಕುಡಿಯುವ ನೀರಿನ ಸಮಸ್ಯೆಗಳು ವಾಸ್ತವವಾಗಿ ಬೇರೆ ಹಾಗೂ ಅಧಿಕಾರಿಗಳು ನೀಡುವ ವಿವರ ಬೇರೆ ಬೇರೆ ಇರಬಾರದು. ಅಧಿಕಾರಿಗಳು ಆಗಿಂದಾಗೆ ಕುಡಿಯುವ ನೀರಿನ ಸಮಸ್ಯೆ ಇರುವ ಸ್ಥಳಗಳಿಗೆ ಭೇಟಿ ನೀಡಬೇಕು.

> **ಕುಡಿಯುವ ನೀರಿನ ಕೊರತೆ ಉಂಟಾದ ಸಂದರ್ಭದಲ್ಲಿ ಬೋರ್ ವೆಲ್ ಕೊರೆಯಲಾಗುತ್ತದೆ. ಸದರಿ ಬೋರ್ ವೆಲ್‌ಗಳಿಗೆ ಚೆಸ್ಕಾಂ ವತಿಯಿಂದ ವಿದ್ಯುತ್ ಸಂಪರ್ಕ ನೀಡುವ ಕೆಲಸವನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು ಎಂದರು.–ಶಾಸಕ ತನ್ವೀರ್ ಸೇಠ್**

> **ಮೈಸೂರು ನಗರ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ವಾರ್ಡ್‌ವಾರು ಇರುವ ಸಮಸ್ಯೆ ಗಳನ್ನು ಮಹಾನಗರ ಪಾಲಿಕೆ ವತಿಯಿಂದ ಪಟ್ಟಿ ಮಾಡಿ ಒದಗಿಸಬೇಕು. ಸಮಸ್ಯೆಗಳನ್ನು ವಿಸ್ತಾರವಾಗಿ ಚರ್ಚಿಸಲು ಸಾಧ್ಯವಾಗುತ್ತದೆ ಎಂದರು.– ಡಾ:ಯತೀಂದ್ರ ಸಿದ್ದರಾಮಯ್ಯ**

### ವಿವಿಧ ಕೆಲಸಗಳಿಗೆ ನೀರು ಒದಗಿಸಬೇಕು

**ಮೈಸೂರು ನಗರ ವ್ಯಾಪ್ತಿಯಲ್ಲಿ ಓವರ್ ಹೆಡ್ ಟ್ಯಾಂಕ್ ಗಳಿಗೆ ಪಂಪಿಂಗ್ ಸೇರಿದಂತೆ ಇತರೆ ವಿದ್ಯುದ್ದೀಕರಣ ಕೆಲಸಗಳನ್ನು ದಿನಾಂಕ ನಿಗದಿಪಡಿಸಿಕೊಂಡು ಅಧಿಕಾರಿಗಳು ಕೆಲಸ ಪೂರ್ಣಗೊಳಿಸಬೇಕು. ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಬೇಕು ನಂತರ ವಿವಿಧ ಕೆಲಸಗಳಿಗೆ ನೀರು ಒದಗಿಸಬೇಕು ಎಂದು ನಿರ್ದೇಶನ ನೀಡಿದರು. ಹನೂರು ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ.**

> **ಅರಣ್ಯ ಪ್ರದೇಶದ ಜನ ವಸತಿ ಇರುವ ಕಡೆಯೂ ಹೆಚ್ಚಿನ ತೊಂದರೆ ಇದೆ.ಜನರಿಗೆ ಶುದ್ಧ ನೀರು ಒದಗಿಸಬೇಕಿದೆ. ನೀರು ಸರಬರಾಜು ಮಾಡುವ ಮೊದಲು ಶುದ್ಧತೆ ಪರೀಕ್ಷೆ ಆಗಬೇಕು ಎಂದು ತಿಳಿಸಿದರು. –ಲೋಕಸಭಾ ಸದಸ್ಯ ಸುನೀಲ್ ಬೋಸ್**

# ಶ್ರೇಷ್ಠ ಪರಂಪರೆ ಹುಟ್ಟು ಹಾಕಿರುವ ವೀರಶೈವ ಲಿಂಗಾಯಿತ ಮಠಗಳು

• ಉದಯವಾಹಿನಿ, ಕನಕಪುರ

ವೀರಶೈವ ಲಿಂಗಾಯಿತ ಮಠಗಳು ಹಾಗೂ ಮುಖಂಡರು ವಿದ್ಯಾಸಂಸ್ಥೆಗಳನ್ನು ತೆರೆದು ಸಮಾಜದ ಇತರೆ ವರ್ಗಗಳಿಗೆ ಅನ್ನ ,ಅಕ್ಷರ, ಆಶ್ರಯವನ್ನು ನೀಡುವ ಮೂಲಕ ಜಗತ್ತಿನಲ್ಲೆ ಶ್ರೇಷ್ಠವಾದ ಪರಂಪರೆಯನ್ನು ಹುಟ್ಟಿಹಾಕಿವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ.

ಇತ್ತೀಚೆಗೆ ನಿಧನರಾದ ಕನಕಪುರ ನಗರದ ಶ್ರೀ ದೇಗುಲ ಮಠಕ್ಕೆ ಆಗಮಿಸಿದ ಲಿಂಗೈಕ್ಯ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳ ಗದ್ದುಗೆಗೆ ನಮನ ಸಲ್ಲಿಸಿ ಅವರು ಮಾತನಾಡಿರು. ಸ್ವತಂತ್ರ್ಯ ಪೂರ್ವದಲ್ಲಿ ಉತ್ತರ ಕರ್ನಾಟಕದಲ್ಲಿ ವಿದ್ಯಾಸಂಸ್ಥೆಗಳು ಇಲ್ಲದ ಸಂದರ್ಭದಲ್ಲಿ 1904–05ರ ಸಾಲಿನಲ್ಲಿ ನಡೆದ ವೀರಶೈವ ಮಹಾ ಅಧಿವೇಶನದಲ್ಲಿ ಅಂದಿನ ಅಧ್ಯಕ್ಷರು ಒಳಗೊಂಡು,ಲಿಂಗಾಯಿತ ಶಿಕ್ಷಣ ಸಂಸ್ಥೆಗಳನ್ನು ತೆರೆಯಬೇಕೆಂಬ ಕರೆಗೆ ದೊಡ್ಡ ದೊಡ್ಡ ಶಾಲಾ ಕಾಲೇಜುಗಳು ತೆರೆದು ದೊಡ್ಡ ಹೆಮ್ಮರವಾಗಿ ಬೆಳೆದು ಇಂದು ವೀರಶೈವ ಲಿಂಗಾಯಿತ ಸಮಾಜಕ್ಕೆ ಮಾತ್ರವಲ್ಲದೆ ಜ್ಯಾತ್ಯಾತೀವಾಗಿ ಶಿಕ್ಷಣವನ್ನು ನೀಡುತ್ತಿವೆ ಎಂದರು.


ಉದಯವಾಹಿನಿ ಚಿತ್ರ

ದಕ್ಷಿಣ ಕರ್ನಾಟಕ ಭಾಗದಲ್ಲಿ ಮೈಸೂರಿನ ಮಹಾರಾಜರು ಶಿಕ್ಷಣ ಸಂಸ್ಥೆಗಳನ್ನು ತೆರೆದು ಬಡವರು ದೀನ ದಲಿತರು, ಹಿಂದುಳಿದ ವರ್ಗದವರಿಗೆ ವಿದ್ಯೆಯನ್ನು ನೀಡಿದರು. ಭಾಗದಲ್ಲಿ ಸಿದ್ದಗಂಗಾ ಮಠವು ವಿದ್ಯಾ ಸಂಸ್ಥೆಗಳನ್ನು ತೆರೆದು ಎಲ್ಲಾ ವರ್ಗದ ಮಕ್ಕಳಿಗೆ ವಿದ್ಯೆಯನ್ನು ನೀಡಿದ ಕೀರ್ತಿಗೆ ಪಾತ್ರವಾಗಿದೆ ಎಂದರು.

ಇನ್ನು ಕನಕಪುರದ ದೇಗುಲ ಮಠದ ಸೇವೆ ಅನ್ನ ಅಶ್ರಯ,ಅಕ್ಷರವನ್ನು ನೀಡುವ ಮೂಲಕ ಈ ಭಾಗದ ಜನರ ಬದುಕಿಗೆ ಲಿಂಗೈಕ್ಯ ಮುಮ್ಮಡಿ ಶ್ರೀ ನಿರ್ವಾಣ ಮಹಾಸ್ವಾಮಿಗಳ ಕೊಡುಗೆ ಅಪಾರವಾಗಿದೆ ಎಂದು

> **ಇಂದಿರಾಗಾಂಧಿ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಭೀಕರ ಬರಗಾಲದ ಸಂದರ್ಭವಾಗಿತ್ತು. ಆ ದಿನಗಳಲ್ಲಿ ಶ್ರೀ ದೇಗುಲಮಠವು ತಾಲ್ಲೂಕಿನ ಜನತೆಗೆ ಗಂಜಿಕೇಂದ್ರವನ್ನು ತೆರೆದು ಪ್ರತಿನಿತ್ಯ 25 ಸಾವಿರದಿಂದ 30 ಸಾವಿರ ಜನತೆಗೆ ನಿರ್ವಾಣ ಮಹಾಸ್ವಾಮಿಗಳೇ ನಿಂತು ಅನ್ನ ಆಶ್ರಯವನ್ನು ಕೊಟ್ಟಂತಹ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ ಎಂದರು.–ರಾಜ್ಯ ಸಚಿವ ವಿ.ಸೋಮಣ್ಣ**

## ಮುಳಬಾಗಿಲು ನರಸಿಂಹ ತೀರ್ಥದಲ್ಲಿ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ

• ಉದಯವಾಹಿನಿ, ಮುಳಬಾಗಿಲು

ನಗರ ಹೊರವಲಯದ ನರಸಿಂಹ ತೀರ್ಥದಲ್ಲಿ ನರಸಿಂಹ ಸ್ವಾಮಿ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು. ರಥೋತ್ಸವ ಪ್ರಯುಕ್ತ ದೇವರ ಮೂಲ ವಿಗ್ರಹವನ್ನು ವಿವಿಧ ಹೂ ಹಾಗೂ ಹಣ್ಣುಗಳಿಂದ ಅಲಂಕರಿಸಲಾಗಿತ್ತು.

ಜೊತೆಗೆ ದೇವಾಲಯದಲ್ಲಿ ವಿವಿಧ ಪೂಜಾ ಕಾರ್ಯಕ್ರಮಗಳು ನೆರವೇರಿದವು. ರಥ ಎಳೆಯುತ್ತಿದ್ದಂತೆ ರಾಜ್ಯದ ವಿವಿಧ ಕಡೆಯಿಂದ ಬಂದಿದ್ದ ಭಕ್ತರು ಬಾಳೆಹಣ್ಣು, ದವಣ, ಉಪ್ಪು ಮತ್ತಿತರ ಮಂಗಳಕರ ವಸ್ತುಗಳನ್ನು ಅರ್ಪಿಸಿ ಹರಕೆ ತೀರಿಸಿದರು.

ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆ ಕಲ್ಪಿಸಲಾಗಿತ್ತು. ರಥೋತ್ಸವಕ್ಕೆ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಭಕ್ತರು ಭಜನೆ, ಕೋಲಾಟ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

# 517ನೇ ನಾಡಪ್ರಭು ಕೆಂಪೇಗೌಡರ ಅದ್ದೂರಿ ಜಯಂತಿ ಕಾರ್ಯಕ್ರಮ

• ಉದಯವಾಹಿನಿ, ಶಿಡ್ಲಘಟ್ಟ

ನಾಡಪ್ರಭು ಕೆಂಪೇಗೌಡರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾದವರಲ್ಲ,ಇಡೀ ಸಮಾಜದ ಅಭಿವೃದ್ಧಿಗೆ ಶ್ರಮಿಸಿದ ಮಹಾನುಭಾವರು ಅಂದಿಗೆ ಬೆಂಗಳೂರಿನಲ್ಲಿ ಕೆರೆಗಳು,ಮಾರುಕಟ್ಟೆಗಳು ಹಾಗೂ ದೇವಸ್ಥಾನಗಳನ್ನು ನಿರ್ಮಿಸುವ ಮೂಲಕ ಜನರಿಗೆ ಮೂಲಭೂತ ಸೌಕರ್ಯ ಒದಗಿಸಿದ್ದರು.

ಮಾಗಡಿಯ ಕೆಂಪಾಪುರದಲ್ಲಿರುವ ಅವರ ಸಮಾಧಿ ಇತಿಹಾಸದ ಸಾಕ್ಷಿಯಾಗಿದೆ ಎಂದು ಸೆಂಟ್ರಲ್ ಸಿಲ್ಕ್ ಬೋರ್ಡ್ ನಿರ್ದೇಶಕರು ಶಿವಣ್ಣ ತಿಳಿಸಿದರು.

ತಾಲ್ಲೂಕಿನ ಮಳ್ಳೂರು ಗ್ರಾಮದ ಬಸ್ ನಿಲ್ದಾಣದಲ್ಲಿ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯನ್ನು ಗ್ರಾಮಸ್ಥರು ಅದ್ದೂರಿಯಾಗಿ ಆಚರಿಸಿದರು.ಈ ಸಂದರ್ಭದಲ್ಲಿ ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿ, ಅವರ ಸಾಧನೆಗಳನ್ನು ಸ್ಮರಿಸಲಾಯಿತು.ಈ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಒಕ್ಕಲಿಗ ಸಮುದಾಯದ ವಿದ್ಯಾರ್ಥಿನಿಯರಾದ 566 ಅಂಕ ಪಡೆದ ರೇಣುಮಾಧವಿ ಹಾಗೂ 528 ಅಂಕ ಪಡೆದ ಚಂದನಾ ಅವರಿಗೆ ತಲಾ 5,000 ನಗದು ನೀಡಿ ಗೌರವಿಸಲಾಯಿತು. ನಗದು ಬಹುಮಾನ ನೀಡಿದ ಎಂ.ಎಸ್. ಮಂಜುನಾಥ್, ಸಿ.ಪಿ. ಹರೀಶ್, ಬಿ.ಎಂ. ಮಂಜುನಾಥ್ ಹಾಗೂ ಡಾಲರ್ಸ್ ವಿನಾಯಕ ಬಳಗದ ಸದಸ್ಯರನ್ನು ಸನ್ಮಾನಿಸಲಾಯಿತು.


ಉದಯವಾಹಿನಿ ಚಿತ್ರ

ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಹಲವು ಮುಖಂಡರು ಹಾಗೂ ಕಾರ್ಯಕರ್ತರಿಗೂ ಗೌರವ ಸಲ್ಲಿಸಲಾಯಿತು. ನಂತರ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ತಮಟೆ ವಾದ್ಯಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜಯಂತಿ ಸಂಭ್ರಮವನ್ನು ಹೆಚ್ಚಿಸಲಾಯಿತು.

ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರಾದ ಸುರೇಶ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರಾಧಾ ಶಿವಕುಮಾರ್, ಮಾಜಿ ಉಪಾಧ್ಯಕ್ಷೆ ಪದ್ಮಾ ಮಂಜುನಾಥಬಾಬು, ಮಾಜಿ ಸದಸ್ಯ ಎಂ.ಎಸ್. ಮಂಜುನಾಥ್, ಗ್ರಾಮದ ಹಿರಿಯರಾದ ಪಿಳ್ಳ ವೆಂಕಟಸ್ವಾಮಿ, ಗೋಪಾಲಪ್ಪ, ಡೈರಿ ನಿರ್ದೇಶಕರಾದ ಹರೀಶ್, ಕೇಶವಮೂರ್ತಿ. ಸಂಘದ ಅಧ್ಯಕ್ಷ ನಾರಾಯಣಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.

# ಉನ್ನತ ಶಿಕ್ಷಣ ಪಡೆದು ಸಮಾಜಕ್ಕೆ ಕೀರ್ತಿ ತನ್ನಿ: ವಿದ್ಯಾರ್ಥಿಗಳಿಗೆ ಸಂಸದ ಪಿ.ಸಿ.ಮೋಹನ್ ಕಿವಿಮಾತು

• ಉದಯವಾಹಿನಿ, ಗೌರಿಬಿದನೂರು



ಉದಯವಾಹಿನಿ ಚಿತ್ರ

ಸಮುದಾಯದ ಮಕ್ಕಳು ಉನ್ನತ ವಿದ್ಯಾಭ್ಯಾಸ ಪಡೆದು ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬೆಳೆದು, ತಾವು ಓದಿದ ಶಾಲೆ, ಗುರುಗಳು, ಪೋಷಕರು ಹಾಗೂ ಸಮುದಾಯಕ್ಕೆ ಕೀರ್ತಿ ತರಬೇಕು ಎಂದು ಸಂಸದ ಪಿ.ಸಿ.ಮೋಹನ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ನಗರದ ಡಾ.ಹೆಚ್.ಎನ್. ಕಲಾಭವನದಲ್ಲಿ ಶ್ರೀ ಯೋಗಿನಾರೇಯಣ ತಾಲ್ಲೂಕು ಬಲಿಜ ಸಂಘದ ವತಿಯಿಂದ ಶನಿವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರ ಸನ್ಮಾನ ಸಮಾರಂಭವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸುಮಾರು 124 ಮಂದಿ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಬಲಿಜ ಸಮುದಾಯದ ಗಣ್ಯರನ್ನು ಗುರುತಿಸಿ ಸನ್ಮಾನಿಸಲಾಗಿರುವುದು ಅತ್ಯಂತ ಶ್ಲಾಘನೀಯ ಸಂಗತಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಆರ್ಥಿಕವಾಗಿ ಹಿಂದುಳಿ ದಿರುವ ಪ್ರತಿಭಾವಂತ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅಗತ್ಯವಾದ ಆರ್ಥಿಕ ನೆರವು ನೀಡುವುದಾಗಿ ಭರವಸೆ ನೀಡಿದರು. ಬಲಿಜ ಸಮುದಾಯದ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಮುದಾಯಕ್ಕೆ ಪ್ರವರ್ಗ–2ಎ ಮೀಸಲಾತಿ ಕಲ್ಪಿಸಿದ್ದರಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಅವಕಾಶ ದೊರಕಿದೆ ಎಂದು ಹೇಳಿದರು.

ಅದೇ ರೀತಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸದ್ಗುರು ಕೈವಾರ ತಾತಯ್ಯ ನವರ ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ಘೋಷಿಸಿ, ಮೊದಲ ಆಚರಣೆಯನ್ನು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಸುವ ಮೂಲಕ ಸಮುದಾಯಕ್ಕೆ ಗೌರವ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಸ್ತಾವಿಕವಾಗಿ ಮಾತನಾಡಿದ ಸಮುದಾಯದ ಮುಖಂಡ ಕೆ.ಎಸ್. ಅನಂತ ರಾಜು, ಕಳೆದ ಇಪ್ಪತ್ತು ವರ್ಷಗಳಿಂದ ಕರ್ನಾಟಕ ರಾಜ್ಯ ಬಲಿಜ ಮಹಾಸಭಾ ಅಧ್ಯಕ್ಷರೂ ಆಗಿರುವ ಸಂಸದ ಪಿ.ಸಿ.ಮೋಹನ್ ಅವರು ತಾಲೂಕಿನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಆರ್ಥಿಕ ನೆರವು ನೀಡುವುದರ ಜೊತೆಗೆ ಸಮುದಾಯದ ಸಂಘಟನೆಗೆ ನಿರಂತರ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ ಎಂದು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಯೋಗಿನಾರೇಯಣ ತಾಲ್ಲೂಕು ಬಲಿಜ ಸಂಘದ ಅಧ್ಯಕ್ಷ ಕಂಬಕ್ಕ ವೆಂಕಟೇಶ್, ವಿಜ್ಞಾನಿ ಮೊದಗಲ ನರಸಿಂಹಲು, ಡಾ. ನಟರಾಜ್ ಶೆಟ್ಟಿ, ಕೋಲಾ ಆನಂದ್, ಡಿ.ವಿ. ರಾಮಲಿಂಗಪ್ಪ, ನಗರಸಭೆಯ ಮಾಜಿ ಅಧ್ಯಕ್ಷೆರೂಪಾ ಅನಂತರಾಜು ಹಾಗೂ ಬಲಿಜ ಸಮುದಾ ಯದ ಮುಖಂಡರಾದ ಶ್ರೀನಿವಾಸ್, ವಕೀಲ ವೆಂಕಟೇಶ್, ರಾಂಬಾಬು, ನಾರಾಯಣಸ್ವಾಮಿ, ಕೋಟೆ ಭಾಸ್ಕರ್, ನಾಗರಾಜ್, ಅಶೋಕ್, ವೆಂಕಟಾದ್ರಿ, ಪ್ರದೀಪ್, ರಮೇಶ್ ಬಾಬು, ರಘು, ಜೈರಾಮ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮಕ್ಕಳ ಆರೋಗ್ಯ ರಕ್ಷಣೆಗಾಗಿ ತಪ್ಪದೇ ಪೋಲಿಯೋ ಹನಿ ಹಾಕಿಸಿ: ಮೋನಾ ರೋತ್

## ಪಲ್ಸ್ ಪೋಲಿಯೋ ಅಭಿಯಾನವನ್ನು ಭಾರತದಲ್ಲಿ 1995ರಿಂದ ನಿರಂತರವಾಗಿ ರಾಷ್ಟ್ರೀಯ ಕಾರ್ಯಕ್ರಮವಾಗಿ ಆಯೋಜಿಸಲಾಗುತ್ತಿದೆ

• ಉದಯವಾಹಿನಿ, ಚಾಮರಾಜನಗರ

ಮಕ್ಕಳನ್ನು ಮಾರಕವಾಗಿ ಕಾಡುವ ಪೋಲಿಯೋ ರೋಗದಿಂದ ರಕ್ಷಿಸಿಕೊಳ್ಳಲು ಪ್ರತಿಯೊಬ್ಬ ನಾಗರಿಕರು ತಮ್ಮ ಐದು ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೋ ಹನಿ ಹಾಕಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಸಲಹೆ ಮಾಡಿದರು. ತಾಲ್ಲೂಕಿನ ಕುದೇರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಅವರಣದಲ್ಲಿಂದು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದಡಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಜಿಲ್ಲೆಯಾದ್ಯಂತ ಮೂರು ದಿನಗಳ ಕಾಲ ಆಯೋಜಿಸಲಾಗಿರುವ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಆರೋಗ್ಯಸಲಹೆಗಳು ಪಲ್ಸ್ ಪೋಲಿಯೋ ಅಭಿಯಾನವನ್ನು ಭಾರತದಲ್ಲಿ 1995ರಿಂದ ನಿರಂತರವಾಗಿ ರಾಷ್ಟ್ರೀಯ ಕಾರ್ಯಕ್ರಮವಾಗಿ ಆಯೋಜಿಸಲಾಗುತ್ತಿದೆ. ಎಲ್ಲಾ ಇಲಾಖೆಗಳ ಸಹಕಾರದಿಂದ ಜಿಲ್ಲೆಯಲ್ಲಿಯೂ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪೋಲಿಯೋ ಹನಿಯಿಂದ ಮಕ್ಕಳ ಶಾಶ್ವತ ಅಂಗವಿಕಲತೆ ತಡೆಯಬಹುದಾಗಿದೆ. ಈ ಹಿಂದೆ ಎಟೀ ಬಾರಿ ಪೋಲಿಯೋ ಲಸಿಕೆ ಹಾಕಿಸಿದ್ದರೂ ಮಕ್ಕಳ ಉತ್ತಮ ಆರೋಗ್ಯ ಹಾಗೂ ಮುಂದಿನ ಭವಿಷ್ಯಕ್ಕಾಗಿ ಆಗತಾನೆ ಹುಟ್ಟಿದ ಮಗುವಿನಿಂದ 5 ವರ್ಷದ ಎಲ್ಲಾ ಮಕ್ಕಳಿಗೂ ಪೋಲಿಯೊ ಹನಿ ಹಾಕಿಸಲು ಪೋಷಕರು ಮುಂದಾಗಬೇಕು ಎಂದು ಸಿ.ಇ.ಒ ಮೋನಾ ರೋತ್ ಅವರು ತಿಳಿಸಿದರು.


ಉದಯವಾಹಿನಿ ಚಿತ್ರ

ಆರೋಗ್ಯ ಮತ್ತು ಕುಟುಂಬ ಇಲಾಖೆಯ ಮೈಸೂರು ವಿಭಾಗೀಯ ಕಚೇರಿಯ ಉಪನಿರ್ದೇಶಕರಾದ ಡಾ. ಮಲ್ಲಿಕಾ ಅವರು ಮಾತನಾಡಿ ಭಾರತ ಪೋಲಿಯೋ ಮುಕ್ತ ರಾಷ್ಟ್ರವಾಗಿದ್ದರೂ 1995ರಿಂದ ಈ ವರೆಗೂ ಪ್ರತಿವರ್ಷ 2–3 ಬಾರಿ ಕಾರ್ಯಕ್ರಮ ಏರ್ಪಡಿಸಿ ಮಕ್ಕಳಿಗೆ ಪೋಲಿಯೋ ಹನಿ ಹಾಕಲಾಗುತ್ತಿದೆ. ಜಾಗೃತಿ ಹಾಗೂ ಮುನ್ನೆಚ್ಚರಿಕೆಯೇ ಈ ಅಭಿಯಾನದ ಪ್ರಮುಖ ಉದ್ದೇಶವಾಗಿದೆ. ಪೋಲಿಯೋ ರೋಗದಿಂದ ಮಕ್ಕಳನ್ನು ಕಾಪಾಡಿಕೊಳ್ಳಲು ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕರು ಮಕ್ಕಳಿಗೆ ಪೋಲಿಯೋ ಹನಿ ಹಾಕಿಸುವಂತೆ ಸಲಹೆ ಮಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ ಅವರು ದೇಶದಲ್ಲಿ ಆರಂಭದಿಂದ ಈವರೆಗೂ ಪೋಲಿಯೋ ನಿರ್ಮೂಲನೆ ಕಾರ್ಯಕ್ರಮವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದ್ದರ ಪರಿಣಾಮವಾಗಿ ಭಾರತ ಪೋಲಿಯೋ ಮುಕ್ತವಾಗಿದೆ.

> **ಜೂನ್ 29 ರಿಂದ ಜುಲೈ 1ರವರೆಗೆ ಮನೆ ಮನೆ ಭೇಟಿ ನೀಡಿ ಲಸಿಕೆ ಹಾಕಲಾಗುವುದು. ಬಸ್ ಹಾಗೂ ರೈಲ್ವೆ ನಿಲ್ದಾಣ ಹಾಗೂ ಜನನಿಬಿಡ ಸ್ಥಳಗಳು ಸೇರಿದಂತೆ ಇತರೆ ಸ್ಥಳದಲ್ಲಿ ಮಕ್ಕಳಿಗೆ ಲಸಿಕೆ ಹಾಕಲು 23 ಟ್ರ್ಯಾನ್ಸಿಟ್ ಬೂತ್‌ಗಳು ಹಾಗೂ 5 ಮೊಬೈಲ್ ಬೂತ್‌ಗಳನ್ನು ಸಹ ತೆರೆಯಲಾಗಿದೆ ಎಂದು ತಿಳಿಸಿದರು.–ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಸ್. ಚಿದಂಬರ**

### ಮಕ್ಕಳಿಗೆ ಲಸಿಕೆ ನೀಡುವ ಗುರಿ

**ಈ ಬಾರಿ ಚಾಮರಾಜನಗರ ತಾಲ್ಲೂಕಿನಲ್ಲಿ 23709, ಗುಂಡ್ಲುಪೇಟೆ 13992, ಕೊಳ್ಳೇಗಾಲ 12124, ಹನೂರು 11508 ಹಾಗೂ ಯಳಂದೂರು ತಾಲ್ಲೂಕಿನಲ್ಲಿ 5268 ಮಕ್ಕಳು ಸೇರಿದಂತೆ ಒಟ್ಟು 66601 ಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಜೂನ್ 28ರಂದು ಬೆಳಿಗ್ಗೆ 8ರಿಂದ ಸಂಜೆ 5 ಗಂಟೆಯವರೆಗೆ ಪೋಲಿಯೋ ಬೂತ್ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.**

## ಮಿನಿ ನ್ಯೂಸ್

### ಜೀವ ಜೀವನ ತಂದೆ ತಾಯಿಯರದ್ದು: ಕೃಷ್ಣಕುಮಾರ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮೈಸೂರು

ಸರಸ್ವತಿಪುರಂನ ಹೆಚ್ ಆರ್ ಝಡ್ ಪಿಟ್ ಸ್ಟಾಪ್ ನಲ್ಲಿ ಕನ್ನಡಧ್ ಕನ್ನಡಿ ಹಾಗೂ ಗಂಡಭೇರುಂಡ ಬೈಕರ್ಸ್ ರವರು ಹಮ್ಮಿಕೊಂಡಿದ್ದ ನಾಲ್ವಡಿ ಪರ್ವದ 13ನೇ ಪಾರಂಪರಿಕ ಬೈಕ್ ಸವಾರಿಗೆ ಕಲಿಯುಗದ ಶ್ರವಣಕುಮಾರ ಕೃಷ್ಣಕುಮಾರ್ ಹಾಗೂ ಮಾತೃ ಶ್ರೀಯವರು ಫ್ಲಾಗ್ ಆಫ್ ಮಾಡುವುದರೊಂದಿಗೆ ಶುಭವನ್ನು ಕೋರಿದರು. ಇದೆ ವೇಳೆ ಮಾತನಾಡಿದ ಕೃಷ್ಣಕುಮಾರ್ ತಂಡೋಪ ತಂಡವಾಗಿ ಕರ್ನಾಟಕದ ಶ್ರೀಮಂತ ಸಂಸ್ಕೃತಿಯನ್ನು ಅರಿಯಲು ನಡೆಸುತ್ತಿರುವ ಈ ಪಾರಂಪರಿಕ ಬೈಕ್ ಸವಾರಿ ಒಂದು ಉತ್ತಮವಾದ ಪ್ರಯತ್ನ ಹಾಗೂ ಶ್ಲಾಘನೀಯ, ಇಂದಿನ ಒತ್ತಡದ ಜೀವನದಲ್ಲಿ ವಾರಾಂತ್ಯಗಳಲ್ಲಿ ನಡೆಸುವ ಇಂತಹ ಔಟಿಂಗ್‌ನಿಂದಾಗಿ ಮೈ ಮನಸ್ಸುಗಳು ಹರ್ಷ ಗೊಳ್ಳುತ್ತವೆ ,ಸುರಕ್ಷಿತ ಚಾಲನಾ ಅಭ್ಯಾಸಗಳನ್ನು ಬೆಳೆಸಿಕೊಳ್ಳುವುದರ ಜೊತೆ ಅತಿ ವೇಗಕ್ಕೆ ಕಡಿವಾಣ ಹಾಕಿ ಈ ಜೀವನ ಕೇವಲ ನಮ್ಮೊಬ್ಬರದಲ್ಲ ಇಷ್ಟು ವರ್ಷ ನಮ್ಮನ್ನು ಸಾಕಿ ಬೆಳೆಸಿ ಜೋಪಾನ ಮಾಡಿರುವ ತಂದೆ ತಾಯಿಯರದ್ದು ಆಗಿದೆ ಎಂದು ಸೂಚ್ಯವಾಗಿ ಕಿವಿಮಾತು ಹೇಳಿದರು.

### 13 ಕಾಮಗಾರಿಗಳಿಗೆ ಜಿ.ಟಿ. ದೇವೇಗೌಡ ಚಾಲನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮೈಸೂರು

ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಬೆಳವಾಡಿ ಗ್ರಾಮದಲ್ಲಿ ಶಾಸಕ ಜಿ.ಟಿ. ದೇವೇಗೌಡ ಅವರು 18.30 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ. ಶಾಸಕರು ಬೆಳವಾಡಿ ಗ್ರಾಮದ ಶ್ರೀ ದೊಡ್ಡಮ್ಮ ತಾಯಿ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆದ ನಂತರ, ಬಸವನಗುಡಿ ವೃತ್ತದಲ್ಲಿ ನಗರಸಭೆ ವತಿಯಿಂದ ಕೈಗೊಳ್ಳುತ್ತಿರುವ ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಳವಾಡಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಿದ್ದು, ಬಿಸಿಲು ಮಾರಮ್ಮನವರ ದೇವಸ್ಥಾನದ ಬಳಿ ಗ್ರಾಮದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ.

**ರೂ. 1 ಕೋಟಿ:** ಬೈರೇಶ್ವರ ಬಡಾವಣೆಯಿಂದ ಕಾವೇರಿ ಬಡಾವಣೆ, ಕೆನರಾ ಬ್ಯಾಂಕ್ ಹಿಂಭಾಗದಿಂದ ಸಿಲಿಕಾನ್ ವ್ಯಾಲಿ ಬಡಾವಣೆ ಹಾಗೂ ಬಿಸಿಲು ಮಾರಮ್ಮ ದೇವಸ್ಥಾನದ ಹಿಂಭಾಗದ ರಸ್ತೆಗಳಲ್ಲಿ ಒಳಚರಂಡಿ ನಿರ್ಮಾಣ ಇದರೊಂದಿಗೆ ಶಿವಮೂರ್ತಿ ಮನೆಯಿಂದ ಯೋಗೇಶ್ ಮನೆವರೆಗೆ ರಸ್ತೆ, ಬೈರವೇಶ್ವರ ಬಡಾವಣೆಯಿಂದ ಕಾವೇರಿ ಬಡಾವಣೆಗೆ ರಸ್ತೆ, ಕೆನರಾ ಬ್ಯಾಂಕ್ ಹಿಂಭಾಗದಿಂದ ಸಿಲಿಕಾನ್ ವ್ಯಾಲಿ ಬಡಾವಣೆಗೆ ರಸ್ತೆ–ಚರಂಡಿ, ಆರ್.ಎಂ.ಪಿ.ಆರ್. ಬಡಾವಣೆ ರಸ್ತೆ, ಲಿಂಗಾಯಿತರ ಬೀದಿ ರಸ್ತೆ, ಅಮೃತೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ಮಳೆ ನೀರು ಚರಂಡಿ ಹಾಗೂ ಪ.ಜಾತಿ ಸ್ಮಶಾನದಲ್ಲಿ ಮೂಲಭೂತ ಸೌಕರ್ಯ ಕಾಮಗಾರಿಗಳು ಸೇರಿದಂತೆ ಒಟ್ಟು 13 ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ.

### ಪಂಜನಹಳ್ಳಿ ವೀರನಪುರ ಮಾರ್ಗ ಮಧ್ಯೆ ಹುಲಿ ಪ್ರತ್ಯಕ್ಷವಾಗಿಲ್ಲ; ಅರಣ್ಯ ಇಲಾಖೆ ಸ್ಪಷ್ಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಪಂಜನಹಳ್ಳಿ ವೀರನಪುರ ಮಾರ್ಗದಲ್ಲಿ ಹುಲಿ ಪ್ರತ್ಯಕ್ಷ ಎಂಬ ಸುದ್ದಿ ಸುಳ್ಳು ಎಂದು ಅರಣ್ಯ ಇಲಾಖೆ ಸ್ಪಷ್ಟಪಡಿಸಿದೆ. ಸ್ಥಳೀಯರ ಮಾಹಿತಿ ಮೇರೆಗೆ ಗ್ರಾಮಕ್ಕೆ ಭೇಟಿ ನೀಡಿದ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದು ಈ ಮಾರ್ಗದಲ್ಲಿ ಹುಲಿ ಕಾಣಿಸಿಕೊಂಡಿರುವ ಬಗ್ಗೆ ಯಾವುದೇ ಅಧಿಕೃತ ದೃಢೀಕರಣ ಇಲ್ಲ. ಸುಳ್ಳು ಸುದ್ದಿ ಹರಡಿಸಿ ಸಾರ್ವಜನಿಕರಲ್ಲಿ ಆತಂಕ ಮೂಡಿಸಲಾಗಿದೆ ಎಂದು ಕಿಡಿಗೇಡಿಗಳ ಕೃತ್ಯವನ್ನ ಬಯಲಿಗೆಳೆದಿದ್ದಾರೆ. ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡದಂತೆ ಅರಣ್ಯ ಇಲಾಖೆ ಮನವಿ ಮಾಡಿದೆ.

### ಚಿಕ್ಕಯ್ಯನಕಟ್ಟೆ ಉಪ ನಾಲೆ ಅಭಿವೃದ್ಧಿಪಡಿಸುವ ಒಟ್ಟು 10 ಕೋಟಿ ವೆಚ್ಚದ ಕಾಮಗಾರಿಗೆ ಭೂಮಿಪೂಜೆ

• ಉದಯವಾಹಿನಿ, ಮುಳಬಾಗಿಲು

ಕ್ಷೇತ್ರದಲ್ಲಿ ಸುಮಾರು 300 ಕೋಟಿಗೂ ಹೆಚ್ಚು ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಲೋಪ ಕಂಡುಬಂದರೆ ಸಹಿಸುವುದಿಲ್ಲ' ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಎಚ್ಚರಿಸಿದರು. ತಾಲ್ಲೂಕಿನ ಚಿಕ್ಕಅಂಕನಹಳ್ಳಿ ಮತ್ತು ಮಹದೇವಪುರ ಮುಖ್ಯ ರಸ್ತೆಯಿಂದ ಅಂಕನಹಳ್ಳಿ ಮಾರಮ್ಮ ದೇವಾಲಯದ ಕೆಮ್ಮಣ್ಣುಪುರ ರಸ್ತೆ ಹಾಗೂ ಚಿಕ್ಕಯ್ಯನಕಟ್ಟೆ ಉಪ ನಾಲೆ ಅಭಿವೃದ್ಧಿಪಡಿಸುವ ಒಟ್ಟು 10 ಕೋಟಿ ವೆಚ್ಚದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ರಸ್ತೆ, ಕಾಲುವೆ, ಕಟ್ಟಡ ಇತರ ಕಾಮಗಾರಿಗಳಿಗೆ ಗುಣಮಟ್ಟದ ಪರಿಕರಗಳನ್ನು ಬಳಸಬೇಕು. ಡಿಪಿಆರ್‌ನಲ್ಲಿ ಇರುವಂತೆ ಕೆಲಸ ನಡೆಯಬೇಕು. ನಿಗದಿತ ಅವಧಿಯಲ್ಲಿ ಕಾಮಗಾರಿಗಳು ಮುಗಿಯುವಂತೆ ಅಧಿಕಾರಿಗಳು ಮತ್ತು ಗುತ್ತಿಗೆದಾರರು ನೋಡಿಕೊಳ್ಳಬೇಕು. ಜನರಿಂದ ದೂರುಗಳು ಬಾರದಂತೆ ಎಚ್ಚರ ವಹಿಸಬೇಕು' ಎಂದು ತಿಳಿಸಿದರು. 'ಈ ಬಾರಿ ವಾಡಿಕೆಯಷ್ಟು ಪೂರ್ವ ಮುಂಗಾರು ಮಳೆ ಬೀಳದೇ ಇರುವುದು ಆತಂಕ ಸೃಷ್ಟಿಸಿದೆ. ಯಾವುದೇ ಊರಿನಲ್ಲಿ ಕುಡಿಯುವ ನೀರಿಗೆ ತೊಂದರೆ ಆಗದಂತೆ ಎಚ್ಚರವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನೀರಿನ ಮೂಲಗಳನ್ನು ಗುರುತಿಸಿ ವರದಿ ನೀಡುವಂತೆ ತಿಳಿಸಲಾಗಿದೆ. ಕುಡಿಯುವ ನೀರಿಗೆ ಸಮಸ್ಯೆಯಾದರೆ ಸಾರ್ವಜನಿಕರು ತಕ್ಷಣ ನನ್ನ ಗಮನಕ್ಕೆ ತರಬೇಕು' ಎಂದು ಹೇಳಿದರು. ನೀರಾವರಿ ನಿಗಮದ ಕಾರ್ಯಪಾಲಕ ಇಂಜಿನಿಯರ್ ವೆಂಕಟರವಣಪ್ಪ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಲೋಹಿತ್ ಕುಮಾರ್, ಕಂದಾಯ

ಅಂತರಾಳದಿಂದ.. EDITORIAL

# ಸುಪ್ರೀಂ ಕೋರ್ಟ್ ಆದೇಶ ಗೃಹ ಖರೀದಿದಾರರು ನಿರಾಳ



ಮನೆ, ಫ್ಲ್ಯಾಟ್ ಗಳನ್ನು ಗ್ರಾಹಕರಿಗೆ ಹಸ್ತಾಂತರಿಸಲು ವಿಳಂಬ ಧೋರಣೆಯನ್ನು ಅನುಸರಿಸುತ್ತ ಬಂದಿರುವ ಬಿಲ್ಡರ್‌ಗಳಿಗೆ ಸುಪ್ರೀಂ ಕೋರ್ಟ್ ತನ್ನ ಮಹತ್ವದ ತೀರ್ಪಿನ ಮೂಲಕ ಬಿಸಿ ಮುಟ್ಟಿಸಿದೆ. ನಿಗದಿತ ಅವಧಿಯೊಳಗಾಗಿ ಮನೆ ಇಲ್ಲವೇ ಫ್ಲ್ಯಾಟ್‌ಗಳನ್ನು ಗ್ರಾಹಕರಿಗೆ ಹಸ್ತಾಂತರಿಸದೆ ಇದ್ದಲ್ಲಿ ವಿಳಂಬದ ಅವಧಿಗೆ ಬಡ್ಡಿ ಇಲ್ಲವೇ ಸೂಕ್ತ ಪರಿಹಾರ ಮೊತ್ತವನ್ನು ಬಿಲ್ಡರ್‌ಗಳು ನೀಡಬೇಕು ಎಂದು ಆದೇಶಿಸಿದೆ. ಸುಪ್ರೀಂ ಕೋರ್ಟ್‌ನ ಈ ತೀರ್ಪಿನಿಂದ ಗ್ರಾಹಕರು ನಿಟ್ಟುಸಿರು ಬಿಡುವಂತಾಗಿದೆ.

ದೇಶಾದ್ಯಂತ ಕಟ್ಟಡ ನಿರ್ಮಾಣಕಾರರು ವಸತಿ ಸಮುಚ್ಚಯ ಇಲ್ಲವೇ ಲೇಔಟ್‌ಗಳಲ್ಲಿ ಫ್ಲ್ಯಾಟ್ ಇಲ್ಲವೇ ಮನೆಗಳನ್ನು ನಿರ್ಮಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಕ್ಕೂ ಮುನ್ನವೇ ಗ್ರಾಹಕರಿಂದ ಮುಂಗಡ ಹಣ ಪಡೆದು ನಿಗದಿತ ಅವಧಿಯೊಳಗಾಗಿ ಕಾಮಗಾರಿಗಳೆಲ್ಲವನ್ನು ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಭರವಸೆ ನೀಡುತ್ತಾರೆ. ಆದರೆ ಬಹುತೇಕ ಸಂದರ್ಭಗಳಲ್ಲಿ ತಮ್ಮ ಮಾತನ್ನು ಉಳಿಸಿಕೊಳ್ಳಲು ವಿಫಲರಾಗುವುದೇ ಅಲ್ಲದೆ ಕಾಮಗಾರಿಯನ್ನು ವಿಳಂಬಗೊಳಿಸುವುದನ್ನು ರೂಢಿಯಾಗಿಸಿಕೊಂಡಿದ್ದಾರೆ. ಕೆಲವು ಬಿಲ್ಡರ್‌ಗಳಂತೂ ವರ್ಷಗಳು ಕಳೆದರೂ ಗ್ರಾಹಕರಿಗೆ ಮನೆ ಇಲ್ಲವೇ ಫ್ಲ್ಯಾಟ್‌ಗಳನ್ನು ಹಸ್ತಾಂತರಿಸದೇ ಸತಾಯಿಸುತ್ತಾರೆ. ಇದೇ ವೇಳೆ ಇಂತಹ ಪ್ರಕರಣಗಳಲ್ಲಿ ವಿಳಂಬದ ಅವಧಿಗೆ ಬಿಲ್ಡರ್‌ಗಳಿಂದ ಸೂಕ್ತ ಪರಿಹಾರ ಅಥವಾ ಬಡ್ಡಿ ಪಡೆಯಲು ಗೃಹ ಖರೀದಿದಾರರಿಗೆ ಸಂಪೂರ್ಣ ಹಕ್ಕಿದೆ. ಅಲ್ಲದೆ ವಿಳಂಬವಾಗಿ ಮನೆ ಇಲ್ಲವೇ ಫ್ಲ್ಯಾಟ್ ಹಸ್ತಾಂತರಿಸುವ ವೇಳೆ ಬಾಕಿ ಪರಿಹಾರಕ್ಕಾಗಿ ಬೇಡಿಕೆ ಸಲ್ಲಿಸುವುದಿಲ್ಲ ಎಂಬಂತಹ ಏಕಪಕ್ಷೀಯ ಒಪ್ಪಂದ ಪತ್ರಕ್ಕೆ ಬಿಲ್ಡರ್‌ಗಳು ಖರೀದಿದಾರರಿಂದ ಸಹಿ ಹಾಕಿಸಿಕೊಳ್ಳುವಂತಿಲ್ಲ ಎಂದೂ ತನ್ನ ಆದೇಶದಲ್ಲಿ ತಿಳಿಸಿದೆ.

ಈ ಮೂಲಕ ಫ್ಲ್ಯಾಟ್ ಸ್ವಾಧೀನ ಪತ್ರಕ್ಕೂಹಸ್ತಾಂತರದಲ್ಲಾಗಿರುವ ವಿಳಂಬಕ್ಕೂ ತಳಕು ಹಾಕಲಾಗದು ಎಂದು ಸ್ಪಷ್ಟ ಮಾತುಗಳಲ್ಲಿ ತಿಳಿಸಿದೆ. ಸುಪ್ರೀಂ ಕೋರ್ಟ್ ನೀಡಿರುವ ಈ ತೀರ್ಪು ಕಟ್ಟಡ ನಿರ್ಮಾಣಕಾರರು ಇಲ್ಲವೇ ಕಂಪೆನಿಗಳಿಗೆ ಎಚ್ಚರಿಕೆಯ ಕರೆಗಂಟೆಯೇ ಸರಿ.

ನಿರ್ಮಾಣ ಹಂತದಲ್ಲಿರುವ ವಸತಿ ಸಂಕೀರ್ಣ ಯೋಜನೆಗಳ ಫ್ಲ್ಯಾಟ್‌ಗಳು ಅಥವಾ ಮನೆಗಳ ಮಾರಾಟಕ್ಕಾಗಿ ಗ್ರಾಹಕರಿಗೆ ವಿವಿಧ ತೆರನಾದ ಕೊಡುಗೆಗಳನ್ನು ಘೋಷಿಸಿ, ವಸತಿರಹಿತರನ್ನು ತಮ್ಮತ್ತ ಸೆಳೆಯಲು ತೋರುವ ಆಸಕ್ತಿಯನ್ನು ಯೋಜನೆಯ ಕಾಮಗಾರಿಯನ್ನು ನಿಗದಿತ ಅವಧಿಯೊಳಗಾಗಿ ಪೂರ್ಣಗೊಳಿಸಿ, ಕ್ಲಪ್ತ ಸಮಯದಲ್ಲಿ ಖರೀದಿದಾರರಿಗೆ ಹಸ್ತಾಂತರಿಸಲು ಬದ್ಧತೆಯನ್ನು ತೋರಬೇಕು.

ಇಲ್ಲಸಲ್ಲದ ನೆಪಗಳನ್ನು ಒಡ್ಡಿ ಫ್ಲ್ಯಾಟ್ ಖರೀದಿದಾರರನ್ನು ಸತಾಯಿಸುವ ಚಾಳಿಯಿಂದ ಬಿಲ್ಡರ್‌ಗಳು ಹೊರಬಂದು ಗ್ರಾಹಕರ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಬೇಕು.

## ಸಾಲದ ಮೇಲಿನ ಬಡ್ಡಿಯ ಹೊರೆ ಗ್ರಾಹಕರನ್ನು ಹೈರಾಣ

**ಸ್ವಂತ ಸೂರೊಂದನ್ನು ಹೊಂದುವ ಮಹತ್ವಾಕಾಂಕ್ಷೆಯಿಂದ ಸಾಲ ಮಾಡಿ ಬಿಲ್ಡರ್‌ಗಳಿಂದ ಫ್ಲ್ಯಾಟ್ ಇಲ್ಲವೇ ಮನೆಗಳನ್ನು ಖರೀದಿಸಿ, ಅದರಲ್ಲಿ ನೆಲೆಯೂರುವ ನಿರೀಕ್ಷೆಯಲ್ಲಿರುವ ಗ್ರಾಹಕರು ಬಿಲ್ಡರ್‌ಗಳ ಈ ವಿಳಂಬ ಧೋರಣೆಯಿಂದ ಹತಾಶರಾಗುತ್ತಾರೆ, ಒಂದೆಡೆಯಿಂದ ಸಾಲದ ಮೇಲಿನ ಬಡ್ಡಿಯ ಹೊರೆ ಗ್ರಾಹಕರನ್ನು ಹೈರಾಣರನ್ನಾಗಿಸಿದರೆ ಮತ್ತೊಂದೆಡೆಯಿಂದ ಮನೆಯೂ ಹಸ್ತಾಂತರಿಸಲ್ಪಡದೆ ತೊಳಲಾಟಕ್ಕೆ ಸಿಲುಕುತ್ತಾರೆ.**

**ಇನ್ನು ಬಾಡಿಗೆ ಮನೆ ಇಲ್ಲವೇ ಫ್ಲ್ಯಾಟ್ ನಲ್ಲಿ ವಾಸವಾಗಿರುವವರಂತೂ ಆರ್ಥಿಕ ಹೊರೆಯಿಂದ ಜರ್ಜರಿತರಾಗುವಂತಾಗಿದೆ. ದೇಶದೆಲ್ಲೆಡೆ ಅದರಲ್ಲೂ ನಗರ ಪ್ರದೇಶಗಳಲ್ಲಿ ಇಂತಹ ಪ್ರಕರಣಗಳು ಸರ್ವೇಸಾಮಾನ್ಯವಾಗಿದ್ದು ಗ್ರಾಹಕರ ಅಳಲು ಹೇಳತೀರದಂತಾಗಿತ್ತು.**

**ಈ ಮೂಲಕ ಫ್ಲ್ಯಾಟ್ ಸ್ವಾಧೀನ ಪತ್ರಕ್ಕೂಹಸ್ತಾಂತರದಲ್ಲಾಗಿರುವ ಇಂತಹ ಸ್ಥಿತಿಯಲ್ಲಿ ಸುಪ್ರೀಂಕೋರ್ಟ್ ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿದ ಈ ತೀರ್ಪು ಬಿಲ್ಡರ್‌ಗಳ ಹೊಣೆಗಾರಿಕೆಯನ್ನು ಜ್ಞಾಪಿಸಿದ್ದೇ ಅಲ್ಲದೆ ಯಾವುದೇ ಕಾರಣಕ್ಕೂ ವಸತಿ ಸಂಕೀರ್ಣಗಳ ನಿರ್ಮಾಣದ ವೇಳೆ ವಿಳಂಬ ನೀತಿಯನ್ನು ಸಹಿಸಲಾಗದು ಎಂದು ನೇರವಾಗಿ ಹೇಳಿದೆ.**



## ಬೆನ್ನಿನ ಕೆಳಭಾಗ ಕೀಲು ನೋವಿಗೆ ಅತ್ಯುತ್ತಮ ಪರಿಹಾರಕ್ಕಾಗಿ ಹಿಮ್ಮುಖ ನಡಿಗೆ ಪ್ರಯತ್ನಿಸಿ: ತಜ್ಞರ ಸಲಹೆ



ನಮ್ಮ ವಾಕಿಂಗ್ ಸ್ವಾಭಾವಿಕವಾಗಿ ಯಾವಾಗಲೂ ಮುಂದಕ್ಕೆ ನಿರ್ದೇಶಿಸಲ್ಪಡುತ್ತದೆ. ಹಿಮ್ಮುಖ ನಡಿಗೆ (ರಿವರ್ಸ್‌ವಾಕಿಂಗ್) ನಮ್ಮ ಆರೋಗ್ಯ ಹಾಗೂ ಮೆದುಳಿನ ಕಾರ್ಯ ಎರಡಕ್ಕೂ ಗಮನಾರ್ಹ ಪ್ರಯೋಜನಗಳನ್ನು ನೀಡುತ್ತದೆ ಎಂದು ಹಲವು ಅಧ್ಯಯನಗಳು ಸ್ಪಷ್ಟವಾಗಿ ಹೇಳುತ್ತವೆ. ಹಿಮ್ಮುಖ ವಾಕಿಂಗ್ ಮಾಡುವುದರಿಂದ ಸ್ಮರಣಶಕ್ತಿ, ಪ್ರತಿಕ್ರಿಯೆ ಸಮಯ ಹಾಗೂ ಸಮಸ್ಯೆ ಪರಿಹರಿಸುವ ಕೌಶಲ್ಯಗಳು ಸುಧಾರಿಸುತ್ತವೆ ಎಂದು ಅಧ್ಯಯನಗಳು ಸೂಚಿಸುತ್ತವೆ. ಹಿಮ್ಮುಖ ನಡಿಗೆಯ ಚಲನೆಯು ಒಳಗೊಂಡಿರುವ ಬಯೋಮೆಕಾನಿಕ್ಸ್‌ನಲ್ಲಿನ ವ್ಯತ್ಯಾಸಗಳಿಂದ ಈ ದೈಹಿಕ ಪ್ರಯೋಜನಗಳು ದೊರಯುತ್ತದೆ. ಕೆಳ ಬೆನ್ನಿನ ನೋವು, ಮೊಣಕಾಲು ಸಮಸ್ಯೆಗಳು ಹಾಗೂ ಕೀಲು ನೋವಿನಿಂದ ಪರಿಹಾರವನ್ನು ಒದಗಿಸಲು ಭೌತಚಿಕಿತ್ಸೆಯಲ್ಲಿ ಈ ವಿಧಾನವನ್ನು ಬಳಕೆ ಮಾಡಲಾಗುತ್ತದೆ. ಈ ರೀತಿಯಲ್ಲಿ ಹಿಮ್ಮುಖ ನಡಿಗೆ 'ರೆಟ್ರೋ ವಾಕಿಂಗ್' ಎಂದು ಕರೆಯಲಾಗುತ್ತದೆ. ಇತ್ತೀಚೆಗೆ, ಅಥ್ಲೆಟಿಕ್ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಹಾಗೂ ಸ್ನಾಯುವಿನ ಬಲವನ್ನು ಹೆಚ್ಚಿಸಲು ಹಿಮ್ಮುಖ ವಾಕಿಂಗ್ ಮಾಡುವ ಅಭ್ಯಾಸವನ್ನು ಬಹುತೇಕ ಕಡೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಅಮೆರಿಕದ ನೆವಾಡಾ ವಿಶ್ವವಿದ್ಯಾಲಯದ ಬಯೋಮೆಕಾನಿಕ್ಸ್ ತಜ್ಞ ಜಾನೆಟ್ ಡುಫೆಕ್ ನೇತೃತ್ವದ ತಂಡವು ಹಿಂದಕ್ಕೆ ವಾಕಿಂಗ್ ಮಾಡುವುದರಿಂದ ಸ್ನಾಯು ಬಲ ಹೆಚ್ಚಾಗುತ್ತದೆ ಎಂದು ತೀರ್ಮಾನಿಸಿದೆ. ನಾಲ್ಕು ವಾರಗಳ ಅವಧಿಯಲ್ಲಿ ಪ್ರತಿದಿನ 10 ರಿಂದ 15 ನಿಮಿಷಗಳ ಕಾಲ ರೆಟ್ರೋ ವಾಕಿಂಗ್ ಮಾಡುವುದರಿಂದ ಹತ್ತು ಆರೋಗ್ಯವಂತ ಮಹಿಳಾ ವಿದ್ಯಾರ್ಥಿನಿಯರಲ್ಲಿ ಮಂಡಿರಜ್ಜು (ತೊಡೆಯ ಸ್ನಾಯುವಿನ ಹಿಂಭಾಗ) ನಮ್ಯತೆ ಸುಧಾರಿಸುತ್ತದೆ ಎಂದು ಸಂಶೋಧನಕರು ಕಂಡುಕೊಂಡುಕೊಂಡಿದ್ದಾರೆ. ಈ ವಿಧಾನದಿಂದ ಬೆನ್ನುಮೂಳೆಯ ಸ್ಥಿರತೆ ಮತ್ತು ನಮ್ಯತೆಗೆ ಕಾರಣವಾಗಿರುವ ಬೆನ್ನಿನ ಸ್ನಾಯುಗಳ ಬಲವರ್ಧನೆಯನ್ನು ಎತ್ತಿ ತೋರಿಸುತ್ತದೆ. ಬಿಗಿಯಾದ ಮಂಡಿರಜ್ಜು ಸ್ನಾಯುಗಳು ಕೆಳ ಬೆನ್ನುನೋವಿಗೆ ಸಾಮಾನ್ಯ ಕಾರಣವಾಗಿದೆ. ಐದು ಕ್ರೀಡಾಪಟುಗಳು ವೈಯಕ್ತಿಕವಾಗಿ ತಂಡಕ್ಕೆ ವರದಿ ಮಾಡಿದಂತೆ ಹಿಮ್ಮುಖ ವಾಕಿಂಗ್ ಮಾಡುವುದರಿಂದ ಅವರ ಕೆಳ ಬೆನ್ನು ನೋವು ಕಡಿಮೆಯಾಗುತ್ತದೆ. ರೆಟ್ರೋ ರನ್ನಿಂಗ್ ಮೊಣಕಾಲಿನ ಕೀಲುಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವಾಗ ಶಕ್ತಿಯನ್ನು ಬೆಳೆಸುವ ಮೂಲಕ ಕ್ರೀಡಾಪಟುಗಳು ಗಾಯಗಳನ್ನು ತಡೆಯಲು ಸಹಾಯ ಮಾಡುತ್ತದೆ. ವಯಸ್ಸಾದವರು, ಯುವಕರು, ಬೊಜ್ಜು ಹೊಂದಿರುವ ವ್ಯಕ್ತಿಗಳು, ಅಸ್ಥಿ ಸಂಧಿವಾತ ರೋಗಿಗಳು ಹಾಗೂ ಪಾರ್ಶ್ವವಾಯುವಿನ ನಂತರ ನಡೆಯಲು ತೊಂದರೆ ಅನುಭವಿಸುತ್ತಿರುವವರಿಗೆ ಇದು ಪ್ರಯೋಜನಕಾರಿಯಾಗಿದೆ. ರೆಟ್ರೋ ವಾಕಿಂಗ್ ಅಥವಾ ಹಿಮ್ಮುಖ ವಾಕಿಂಗ್‌ನಿಂದ ಸೊಂಟ ಮತ್ತು ಮೊಣಕಾಲಿನ ಕೀಲುಗಳೆರಡರಲ್ಲೂ ಚಲನೆಯ ವ್ಯಾಪ್ತಿಯು ಗಮನಾರ್ಹವಾಗಿ ಕಡಿಮೆಯಾಗುತ್ತದೆ. ಮುಂದಕ್ಕೆ ನಡೆಯುವುದು ಹಿಮ್ಮಡಿ ನೆಲಕ್ಕೆ ಬಡಿಯುವುದರೊಂದಿಗೆ ಆರಂಭವಾಗುತ್ತದೆ. ಆದರೆ, ಹಿಂದಕ್ಕೆ ನಡೆಯುವ ನಡಿಗೆ ಕಾಲ್ಬೆರಳುಗಳಿಂದ ಆರಂಭವಾಗುತ್ತದೆ. ಕೆಲವೊಮ್ಮೆ ಹಿಮ್ಮಡಿ ನೆಲವನ್ನು ಮುಟ್ಟುವುದಿಲ್ಲ. ಇದರ ಪರಿಣಾಮವಾಗಿ ಮೊಣಕಾಲಿನ ಮೇಲೆ ಕಡಿಮೆ ಪರಿಣಾಮ ಬೀರುತ್ತದೆ ಎಂದು ಆರೋಗ್ಯ ತಜ್ಞರು ತಿಳಿಸುತ್ತಾರೆ. ಸಾಮಾನ್ಯ ನಡಿಗೆಗೆ ಹೋಲಿಸಿದರೆ, ಹಿಂದಕ್ಕೆ ನಡೆಯುವುದರಿಂದ ವಿಭಿನ್ನ ಸ್ನಾಯುಗಳು ತೊಡಗುತ್ತವೆ. ವಾಸ್ತವವಾಗಿ ಹಿಮ್ಮಡಿ ನಡೆಯುವಾಗ ಪಾದದ ಕೀಲು ಹೆಚ್ಚಿನ ಪ್ರಮಾಣದ ಆಘಾತ ಹೀರಿಕೊಳ್ಳುತ್ತದೆ.

ಪ್ಲಾಂಟರ್ ಬಾಗುವಿಕೆಯಿಂದ ಸಕ್ರಿಯಗೊಳಿಸಲಾದ ಸ್ನಾಯುಗಳು ಪಾದವನ್ನು ಮುಂದಕ್ಕೆ ಚಾಚುವಾಗ ಅಥವಾ ತುದಿಕಾಲುಗಳ ಮೇಲೆ ನಿಲ್ಲುವಾಗ ಬಳಸುವ ಚಲನೆ -ಪಾದದ ವೇಗವನ್ನು ಕಡಿಮೆ ಮಾಡುವಲ್ಲಿ ಮತ್ತು ಹಿಂದಕ್ಕೆ ನಡೆಯುವಾಗ ಆಘಾತವನ್ನು ಹೀರಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

# ಮಧುಮೇಹಕ್ಕೆ ಮದ್ದು: ವಕ್ರಾಸನ

ಮಧುಮೇಹವೆಂದರೆ ದೇಹವನ್ನು ಒಳಗಿನಿಂದಲೇ ತಿನ್ನುವ ಸಿಹಿ ಸವಾಲು. ರಕ್ತದಲ್ಲಿ ಸಕ್ಕರೆ ಏರಿದಂತೆ ಕಣ್ಣು, ನರ, ಮೂತ್ರಪಿಂಡ, ಹೃದಯಕ್ಕೆ ಮೌನದ ಅಪಾಯ ಕಾದಿರುತ್ತದೆ. ಇದರ ಕಡಿವಾಣ ಹಿಡಿದಿರುವುದು ಇನ್ಸುಲಿನ್ ಎಂಬ ಹಾರ್ಮೋನ್. ಮಾತ್ರೆಯ ಜೊತೆಗೆ ಯೋಗವೂ ಇಲ್ಲಿ ಸಿಹಿ ಮದ್ದು. ಅದರಲ್ಲೂ ವಕ್ರಾಸನವು ಮೇದೋಜೀರಕ ಗ್ರಂಥಿಯನ್ನು ಎಚ್ಚರಿಸಿ ಇನ್ಸುಲಿನ್ ಸ್ರವಿಕೆಯನ್ನು ಸಹಜವಾಗಿಸುವ ಶಕ್ತಿ ಭಂಗಿ. 'ವಕ್ರ' ಎಂದರೆ ತಿರುಚಿದ ಹೊಟ್ಟೆಯನ್ನು ನಯವಾಗಿ ತಿರುಗಿಸಿ ಒಳಗಿನ ಅಂಗಗಳಿಗೆ ಹೊಸ ಚೈತನ್ಯ ತುಂಬುವ ಆಸನವಿದು.



ಡಾ. ಈರಪ್ಪ ಲಕ್ಷ್ಮಣ ಘಸ್ತಿ

ಬೆನ್ನುಮೂಳೆಯನ್ನು ತಿರುಗಿಸಿದಾಗ ಕಿಬ್ಬೊಟ್ಟೆಯ ಸ್ನಾಯುಗಳು ಆಳವಾಗಿ ಹಿಗ್ಗಿ, ಯಕೃತ್, ಕರುಳು ಮತ್ತು ಮುಖ್ಯವಾಗಿ ಮೇದೋಜೀರಕ ಗ್ರಂಥಿಗೆ ನೈಸರ್ಗಿಕ ಮಸಾಜ್ ದೊರೆಯುತ್ತದೆ. ಆಗ ಬೀಟಾ ಕೋಶಗಳು ಚುರುಕಾಗಿ ಇನ್ಸುಲಿನ್ ಸ್ರವಿಸಿ, ಗ್ಲುಕೋಸ್ ಜೀವಕೋಶ ಸೇರುತ್ತದೆ. ಪರಿಣಾಮವಾಗಿ ರಕ್ತದ ಸಕ್ಕರೆ ಇಳಿಯುತ್ತದೆ. ಜೀರ್ಣಕ್ರಿಯೆ ಸುಧಾರಿಸಿ ಮಲಬದ್ಧತೆ ಮಾಯವಾಗುತ್ತದೆ, ಚಯಾಪಚಯ ಚುರುಕಾಗಿ ತೂಕ ಹತೋಟಿಗೆ ಬರುತ್ತದೆ. ಮನದ ಒತ್ತಡ ಕರಗಿ ಕಾರ್ಟಿಸೋಲ್ ಇಳಿಯುತ್ತದೆ.



**ಅಭ್ಯಾಸ ಕ್ರಮ:** ದಂಡಾಸನದಲ್ಲಿ ಕಾಲು ಚಾಚಿ ಕುಳಿತು, ಎಡಗಾಲನ್ನು ಮಡಚಿ ಬಲತೊಡೆಯ ಹೊರಗೆ ಊರಿ. ಬಲಗೈಯನ್ನು ಎಡಮೊಣಕಾಲಿನ ಹೊರಗೆ ತಂದು ಪಾದ ಹಿಡಿಯಿರಿ, ಎಡಗೈಯನ್ನು ಬೆನ್ನ ಹಿಂದೆ ಊರಿ. ಉಸಿರು ಬಿಡುತ್ತ ಮುಂಡವನ್ನು ಎಡಕ್ಕೆ ತಿರುಗಿಸಿ, ಕುತ್ತಿಗೆ ತಿರುಗಿಸಿ ಎಡ ಹೆಗಲ ಮೇಲೆ ದೃಷ್ಟಿ ನಿಲ್ಲಿಸಿ. ಬೆನ್ನು ನೇರ, ಎದೆ ಅರಳಿರಲಿ. 30 ಸೆಕೆಂಡು ಸಹಜ ಉಸಿರಿನಲ್ಲಿದ್ದು, ಮೂಲ ಸ್ಥಾನಕ್ಕೆ ಬನ್ನಿ. ಬಲಭಾಗದಲ್ಲೂ ಮಾಡಿ. ಖಾಲಿ ಹೊಟ್ಟೆಯಲ್ಲಿ ಬೆಳಗ್ಗೆ ಅಥವಾ ಸಂಜೆ, ಪ್ರತಿ ಬದಿಗೆ 2-3 ಸುತ್ತು.

**ಎಚ್ಚರ:** ಸೊಂಟ, ಭುಜ, ಕುತ್ತಿಗೆ ಗಾಯ, ಶಸ್ತ್ರಚಿಕಿತ್ಸೆ ಆದವರು, ತೀವ್ರ ಬೆನ್ನುನೋವು, ಸ್ಲಿಪ್ ಡಿಸ್ಕ್, ಹರ್ನಿಯಾ, ಹೊಟ್ಟೆಹುಣ್ಣು ಇರುವವರು, ಗರ್ಭಿಣಿಯರು ಈ ಆಸನದಿಂದ ದೂರವಿರಿ.

ತಲೆಸುತ್ತು, ನೋವು ಕಂಡರೆ ತಕ್ಷಣ ನಿಲ್ಲಿಸಿ. ಯೋಗವು ಪೂರಕ ಚಿಕಿತ್ಸೆಯೇ ಹೊರತು ಮಾತ್ರೆ, ಇನ್ಸುಲಿನ್ ನಿಲ್ಲಿಸಬಾರದು. ರಕ್ತದ ಸಕ್ಕರೆ ನಿಯಮಿತವಾಗಿ ಪರೀಕ್ಷಿಸಿ, ವೈದ್ಯರ ಮತ್ತು ನುರಿತ ಗುರುಗಳ ಮಾರ್ಗದರ್ಶನ ಕಡ್ಡಾಯ.

## ಕಲಾ ಸಾಹಿತ್ಯ



ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

## ಭಾರತರತ್ನ ಪುರಸ್ಕೃತರು, ಹೆಸರಾಂತ ಹಿರಿಯ ವಿಜ್ಞಾನಿ ಪ್ರೊ: ಸಿಎನ್‌ಆರ್. ರಾವ್‌ರವರ 92 ನೇ ವರ್ಷದ ಜನ್ಮದಿನಾಚರಣೆ

ಪ್ರೊಫೆಸರ್ ಸಿಎನ್‌ಆರ್ ರಾವ್ ಅವರು 1934 ಜೂನ್ 30 ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ನಾಗೇಶರಾವ್, ತಾಯಿ ನಾಗಮ್ಮ. ತಂದೆ-ತಾಯಿಗಳು ಸುಸಂಸ್ಕೃತರು, ಸಜ್ಜನರೂ ಆಗಿದ್ದು, ರಾವ್ ರವರು ಒಳ್ಳೆಯ ಪರಿಸರದಲ್ಲಿ ಬೆಳೆದು ಬಾಲ್ಯದಿಂದಲೇ ಓದಿನಲ್ಲಿ ಆಸಕ್ತಿ, ಶ್ರದ್ಧೆ ಹಾಗೂ ಜೀವನ ಮೌಲ್ಯಗಳನ್ನು ಬೆಳೆಸಿಕೊಂಡರು. ಪ್ರಾಥಮಿಕ, ಪ್ರೌಢಶಾಲಾ ಹಾಗೂ ಕಾಲೇಜು ಶಿಕ್ಷಣವನ್ನು ( ಬಿಎಸ್ಸಿ ಪದವಿಯನ್ನು) ಬೆಂಗಳೂರಿನಲ್ಲಿ ಪೂರೈಸಿ , ನಂತರ ಕಾಶಿ ಹಿಂದೂ ವಿಶ್ವವಿದ್ಯಾಲಯದಲ್ಲಿ ಎಂಎಸ್ಸಿ ಪದವಿ ಪಡೆದರು. ಪ್ರೊಫೆಸರ್ ಸಿಎನ್‌ಆರ್‌ರಾವ್ ಅವರು ಹೆಚ್ಚಿನ ವ್ಯಾಸಂಗಕ್ಕೆ ಅಮೆರಿಕಾಗೆ ತೆರಳಿ,ಅಲ್ಲಿನ ಶೆಡ್ಯೂರ್ವ ವಿಶ್ವವಿದ್ಯಾಲಯದಲ್ಲಿ ಪಿ ಎಚ್ ಡಿ ಪದವಿ ಪಡೆದರು. ನಂತರ ಭಾರತಕ್ಕೆ ವಾಪಸು ಬಂದು ಅವರು ಸ್ವತಂತ್ರವಾಗಿ ಹಲವಾರು ಪ್ರಯೋಗಗಳನ್ನು ನಡೆಸಿದರು.ಇವರ ಪ್ರಯೋಗಳಿಗೆ ಮೈಸೂರು ವಿಶ್ವವಿದ್ಯಾಲಯ ಡಿ.ಎಸ್ಸಿ ಪದವಿ ನೀಡಿದರು. ಭಾರತೀಯ ವಿಜ್ಞಾನ ಮಂದಿರ ಹಾಗೂ ಹಲವಾರು ವಿಜ್ಞಾನಕ್ಷೇತ್ರಗಳಲ್ಲಿ ಅಗ್ರಗಣ್ಯ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿರುತ್ತಾರೆ.

ಪ್ರೊಫೆಸರ್ ಸಿಎನ್‌ಆರ್‌ರಾವ್ ಅವರು ಕಳೆದ 50 ವರ್ಷಗಳಿಂದ ಸಂಶೋಧನೆಗಳನ್ನು ನಿರಂತರವಾಗಿ ನಡೆಸುತ್ತಿದ್ದಾರೆ. 800 ಕ್ಕೂ ಹೆಚ್ಚಿನ ವೈಜ್ಞಾನಿಕ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ,40ಕ್ಕೂ ಹೆಚ್ಚಿನ ವೈಜ್ಞಾನಿಕ ಪುಸ್ತಕಗಳನ್ನು ರಚಿಸಿದ್ದಾರೆ.

1984ರಲ್ಲಿ ಪ್ರೊಫೆಸರ್ ರಾವ್ ಅವರು ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾದರು. ನಂತರ ನೆಹರು ಸೆಂಟರ್ ನಲ್ಲಿ ಕಾರ್ಯನಿರ್ವಹಿಸಿ ನ್ಯಾನೋ-ತಂತ್ರಜ್ಞಾನ ಕ್ಷೇತ್ರದಲ್ಲಿ ಅನೇಕ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸಿದ್ದಾರೆ.

ಪ್ರೊಫೆಸರ್ ಸಿಎನ್‌ಆರ್ ರಾವ್ ಅವರು ರಾಷ್ಟ್ರ- ಅಂತರಾಷ್ಟ್ರೀಯ ಮಟ್ಟದಲ್ಲಿ ಬಹಳಷ್ಟು ಮನ್ನಣೆಯನ್ನು ಗಳಿಸಿದ್ದಾರೆ.ಪ್ರೊಫೆಸರ್ ರಾವ್ ರವರಿಗೆ ಭಾರತ ಸರ್ಕಾರ ಪದ್ಮಶ್ರೀ, ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ರತ್ನ ಪ್ರಶಸ್ತಿ ಲಭಿಸಿದೆ, ಭಾರತ ಹಾಗೂ ಪಾಶ್ಚಾತ್ಯ ದೇಶಗಳ ಹಲವಾರು ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಿ.ಎಸ್ ಸಿ ಪದವಿ ನೀಡಿ ಗೌರವಿಸಿದೆ.



ಇವರಿಗೆ ಶಾಂತಿ ಸ್ವರೂಪ ಭಟ್ನಾಗರ್ ಪ್ರಶಸ್ತಿ, ನೆಹರು ಫೆಲೋಷಿಪ್, ಸಿವಿ ರಾಮನ್ ಪ್ರಶಸ್ತಿ ,ಪಿಸಿ ರೇ ಸ್ಮಾರಕ ಪ್ರಶಸ್ತಿ ಲಭಿಸಿದೆ.ವಿಜ್ಞಾನ ಕ್ಷೇತ್ರದಲ್ಲಿ ಸತತ ವ್ಯಾಸಂಗ, ಶ್ರದ್ಧೆ, ಏಕಾಗ್ರತೆಯಿಂದ ಸಂಶೋಧನೆಗಳನ್ನು ನಡೆಸಿ ವಿಜ್ಞಾನದ ಪ್ರಗತಿಗೆ ಅಪೂರ್ವ ಕೊಡುಗೆ ನೀಡಿದ ಹಿರಿಯ ಜೀವ ಪ್ರೊಫೆಸರ್ ಸಿಎನ್‌ಆರ್ ರಾವ್ ಅವರು ನಾಡಿನ ಯುವ ವಿಜ್ಞಾನಿಗಳಿಗೆ ಆದರ್ಶರಾಗಿ ಸ್ಪೂರ್ತಿದಾಯಕರಾಗಿದ್ದಾರೆ.

**ಪ್ರೊಫೆಸರ್:** ಸಿಎನ್‌ಆರ್ ರಾವ್ ರವರು ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, ಮಿಗಿಲಾಗಿ ಸನ್ಮಾನ್ಯರು ಉತ್ತಮ ಮನುಷ್ಯರಾಗಿ, ಮಾನವೀಯತೆಯ ಸಾಕಾರಮೂರ್ತಿರವರಾಗಿದ್ದು ಇಂದು ಅವರ 92 ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಅವರಿಗೆ ಆಯಸ್ಸು, ಆರೋಗ್ಯ, ನೆಮ್ಮದಿ ಹಾಗೂ ಶಾಂತಿ ದೊರಕಲೆಂದು ಪ್ರಾರ್ಥಿಸುತ್ತೇನೆ.



ವಿದ್ಯಾರ್ಥಿ ವಿಜಯ
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
8

## ಗೆಲುವಿನ ಗುಟ್ಟು: ಸದುಪಯೋಗ

ವಿದ್ಯಾರ್ಥಿಯ ಬದುಕು ಒಂದು ತೋಟವಿದ್ದಂತೆ. ಅದರಲ್ಲಿ ಪಠ್ಯಪುಸ್ತಕಗಳು ಬೀಜವಾದರೆ, ಶಿಕ್ಷಕರ ಮಾರ್ಗದರ್ಶನ ನೀರು, ಗ್ರಂಥಾಲಯ ಗೊಬ್ಬರ,ಅಂತರ್ಜಾಲ ಸೂರ್ಯನ ಬೆಳಕು.ಇವುಗಳ ಜೊತೆಗೆ ಸಮಯ ಮತ್ತು ಶಕ್ತಿ ಎಂಬ ಎರಡು ಅಮೂಲ್ಯ ಆಸ್ತಿಗಳಿವೆ. ಈ ಸಂಪನ್ಮೂಲಗಳನ್ನು ವಿವೇಕದಿಂದ ಹದಗೊಳಿಸಿ ಬಳಸಿದವನೇ ಜ್ಞಾನದ ಫಸಲು ಕೊಯ್ಯುತ್ತಾನೆ. ಗುರಿಯಿಲ್ಲದ ಓದು ದಿಕ್ಕು ತಪ್ಪಿದ ನೌಕೆಯಂತೆ ಯೋಜಿತ ಸದುಪಯೋಗವೇ ಯಶಸ್ಸಿನ ದಿಕ್ಸೂಚಿ.

ವಿಜ್ಞಾನ ಹೇಳುತ್ತದೆ ಬೇರೆಬೇರೆ ಮೂಲಗಳಿಂದ ಮಾಹಿತಿ ಪಡೆದಾಗ ಮೆದುಳಿನಲ್ಲಿ ಹೊಸ ನರಸಂಪರ್ಕಗಳು ಮೂಡುತ್ತವೆ.

ಪುನರಾವರ್ತನೆ ನೆನಪಿನ ಗಂಟನ್ನು ಬಿಗಿಯುತ್ತದೆ. ಮೊಬೈಲ್ ಗಂಟೆಗಟ್ಟಲೆ ನುಂಗುವ ಬದಲು ಪೊಮೊಡೊರೊ ತಂತ್ರದಂತೆ 25 ನಿಮಿಷ ಓದು, 5 ನಿಮಿಷ ವಿರಾಮ ಈ ಶಿಸ್ತು ಮನಸ್ಸನ್ನು ಚುರುಕುಗೊಳಿಸುತ್ತದೆ. ಸಮಯದ ಲೆಕ್ಕ ಇಟ್ಟವನಿಗೆ ಸೋಲು ಹತ್ತಿರ ಸುಳಿಯದು.

ಸಂಪನ್ಮೂಲ ಸದ್ಬಳಕೆ ಎಂದರೆ ಬರೀ ಅಂಕಗಳಲ್ಲ, ವ್ಯಕ್ತಿತ್ವದ ವಿಕಾಸ. ಶಿಸ್ತು, ಆತ್ಮವಿಶ್ವಾಸ, ಸ್ಪಷ್ಟತೆಗಳು ತಾನಾಗಿಯೇ ಮೊಳೆಯುತ್ತವೆ.

ಕೈಯಲ್ಲಿರುವ ಕಲ್ಲನ್ನೇ ವಜ್ರ ಮಾಡುವ ಕಲೆ ಕಲಿತ ವಿದ್ಯಾರ್ಥಿಗೆ ವಿಜಯ ದೂರದ ಮಾತಲ್ಲ. ಆದ್ದರಿಂದ ಇಂದೇ ಪ್ರತಿಜ್ಞೆ ಮಾಡಿ ಇರುವುದನ್ನು ಅರಿತು, ಸಿಕ್ಕಿದ್ದನ್ನು ಸರಿಯಾಗಿ ಬಳಸಿ, ಸಾಧನೆಯ ಶಿಖರ ಮುಟ್ಟೋಣ.

**ಮೊದಲು ಬೇಕಾದ ಪುಸ್ತಕಗಳನ್ನು ಆಯ್ದು ವಿಷಯವಾರು ಜೋಡಿಸಬೇಕು.ಓದಿದರಷ್ಟೇ ಸಾಲದು, ಮುಖ್ಯ ಅಂಶಗಳನ್ನು ಸ್ವಂತ ಟಿಪ್ಪಣಿ ಮಾಡಿ ನಿತ್ಯ ಮೆಲುಕು ಹಾಕಬೇಕು. ಗುರುವಿನ ಮಾತು ಕಿವಿಗೆ ಬಿದ್ದು ಮನದಲ್ಲಿ ನೆಲೆಸಿದರೆ ಮಾತ್ರ ವಿದ್ಯೆ ಫಲ ನೀಡುತ್ತದೆ. ಇಂದು ಅಂತರ್ಜಾಲವೆಂಬ ಅಗಾಧ ಸಾಗರವಿದೆ. ಅದರಲ್ಲಿ ಮುಳುಗದೇ ಮುತ್ತು ಆರಿಸುವ ಚಾತುರ್ಯ ಬೇಕು. ವಿಡಿಯೊ, ಇ-ಪುಸ್ತಕ, ಕ್ವಿಜ್‌ಗಳನ್ನು ಅಳತೆ ಮೀರಿ ಬಳಸಿದರೆ ಕಲಿಕೆ ಆಟವಾಗುತ್ತದೆ.**



## ಶ್ರೀರಾಮ ಮಂದಿರದ ಹುಂಡಿಯ ಹಣ ದುರುಪಯೋಗ ಪ್ರಕರಣ; ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಿ !

ಮಂದಿರದ ಹುಂಡಿಯಲ್ಲಿನ ಕಾಣಿಕೆಯನ್ನು ದುರುಪಯೋಗ ಪಡಿಸಿಕೊಳ್ಳುವುದು ಮಹಾಪಾಪ ಮಂದಿರಗಳ ಆಡಳಿತ ಭಕ್ತರ ಕೈಯಲ್ಲೇ ಇರಲಿ ! - ಹಿಂದೂ ಜನಜಾಗೃತಿ ಸಮಿತಿ ಅಯೋಧ್ಯೆಯ ಶ್ರೀರಾಮ ಮಂದಿರವು ಕೇವಲ ಒಂದು ಧಾರ್ಮಿಕ ಸ್ಥಳವಲ್ಲ, ಅದು ಜಗತ್ತಿನಾದ್ಯಂತ ಇರುವ ಕೋಟ್ಯಂತರ ಹಿಂದೂಗಳ ಶತಮಾನಗಳ ಬಲಿದಾನ, ದೀರ್ಘಕಾಲದ ಹೋರಾಟ ಮತ್ತು ಶ್ರದ್ಧೆಯ ಪ್ರತೀಕವಾಗಿದೆ. ಮಂದಿರದ ಹುಂಡಿಯಲ್ಲಿನ ಕಾಣಿಕೆಯನ್ನು ದುರುಪಯೋಗಪಡಿಸಿಕೊಳ್ಳುವುದು ಮಹಾಪಾಪವಾಗಿದೆ.

ಪ್ರಭು ಶ್ರೀರಾಮನು ಅವರ ಕರ್ಮಕ್ಕೆ ತಕ್ಕ ಶಿಕ್ಷೆಯನ್ನು ನೀಡಿಯೇ ನೀಡುತ್ತಾನೆ. ಆದರೆ, ಸರಕಾರವು ಈ ಪ್ರಕರಣದಲ್ಲಿ ಯಾರು ತಪ್ಪಿತಸ್ಥರೆಂದು ಶೀಘ್ರವಾಗಿ ತನಿಖೆ ನಡೆಸಿ ಸತ್ಯವನ್ನು ಜನತೆಯ ಮುಂದೆ ತರಬೇಕು ಮತ್ತು ತಪ್ಪಿತಸ್ಥರ ಮೇಲೆ ಅತ್ಯಂತ ಕಠಿಣ ಕ್ರಮ ಕೈಗೊಳ್ಳಬೇಕೆಂದು ಹಿಂದೂ ಜನಜಾಗೃತಿ ಸಮಿತಿಯು ಆಗ್ರಹಿಸಿದೆ.ಯಾವುದೇ ಮಂದಿರದ ಸಮಿತಿಯಲ್ಲಿ ಕೇವಲ ದೇವರ ಭಕ್ತರು ಮಾತ್ರ ಇರಬೇಕು ಎಂದು ನಾವು ಈ ಹಿಂದೆಯೂ ಹಲವು ಬಾರಿ ಒತ್ತಾಯಿಸಿದ್ದೇವೆ. ಭಕ್ತನು ಈಶ್ವರನ ಉಪಾಸಕನಾಗಿರುವುದರಿಂದ, ದೇವನಿಧಿಯನ್ನು ಕದಿಯುವ ವಿಚಾರವನ್ನು ಕನಸಿನಲ್ಲೂ ಮಾಡಲು ಸಾಧ್ಯವಿಲ್ಲ. ನಿಜವಾದ ಅರ್ಥದಲ್ಲಿ ಮಂದಿರಗಳ ಉದ್ಧಾರವಾಗಬೇಕೆಂದರೆ, ಭಗವಂತನ ಅಂತಹ ಭಕ್ತರೇ ಮಂದಿರ ವ್ಯವಸ್ಥೆಯಲ್ಲಿ ಇರಬೇಕು. ಇಂತಹ ಪ್ರಕರಣಗಳಿಂದ ಸರಕಾರವು 'ಮಂದಿರಗಳ ಸರಕಾರೀಕರಣ' ಮಾಡಲು ಪ್ರಯತ್ನಿಸುತ್ತದೆ, ಇದನ್ನು ನಾವು ಸದಾ ವಿರೋಧಿಸುತ್ತೇವೆ ಎಂಬ ನಿಲುವನ್ನು ಸಮಿತಿಯು ವ್ಯಕ್ತಪಡಿಸಿದೆ.

ಯಾವ ಸರಕಾರಿ ಅಧಿಕಾರಿಗಳು ಸ್ವತಃ ಭ್ರಷ್ಟರಾಗಿರುತ್ತಾರೋ, ಆಡಳಿತ ಯಂತ್ರದಲ್ಲಿ ಬೇರೂರಿರುವ ಭ್ರಷ್ಟ ವ್ಯವಸ್ಥೆಯ ಭಾಗವಾಗಿರುತ್ತಾರೋ, ಅಂತಹ ಅಧಿಕಾರಿಗಳು ಮಂದಿರ ಸಮಿತಿಯ ಭ್ರಷ್ಟಾಚಾರವನ್ನು ಹೇಗೆ ತಡೆಗಟ್ಟಬಲ್ಲರು? ಆದ್ದರಿಂದ ಧಾರ್ಮಿಕ ಸ್ಥಳಗಳಲ್ಲಿ ಜಾತ್ಯತೀತ ಸರಕಾರದ ಹಸ್ತಕ್ಷೇಪ ಬೇಡವೇ ಬೇಡ. ಮಂದಿರಗಳ ಸರಕಾರೀಕರಣದ ನಂತರ ಮಂದಿರದ ನಿಧಿಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿರುವ ಅನೇಕ ಉದಾಹರಣೆಗಳು ದೇಶದಲ್ಲಿವೆ.

ಈ ದೃಷ್ಟಿಯಿಂದ, ಮಂದಿರದ ಜವಾಬ್ದಾರಿಯನ್ನು ಭಗವಂತನ ಸೇವೆಯೆಂದು ಸ್ವೀಕರಿಸಿ ಕಾರ್ಯನಿರ್ವಹಿಸುವ ಭಗವಂತನ ನಿಜವಾದ ಭಕ್ತರಿಗೆ ಮಂದಿರಗಳ ಆಡಳಿತವನ್ನು ಹಸ್ತಾಂತರಿಸಬೇಕು ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಷ್ಟ್ರೀಯ ವಕ್ತಾರರಾದ ಶ್ರೀರಮೇಶ ಶಿಂದೆ ಅವರು ಅಭಿಪ್ರಾಯಪಟ್ಟಿದ್ದಾರೆ.



# ಶಿಗ್ಗಾವಿ ಮತಕ್ಷೇತ್ರದಿಂದ ಬಿಜೆಪಿ ಪ್ರಬಲ ಆಕಾಂಕ್ಷಿ ಮಹೇಶ್ ಚ ತೇಲಕರ

• **ಉದಯವಾಹಿನಿ, ಬೆಂಗಳೂರು**

ಹಾವೇರಿ ಜಿಲ್ಲೆಯ ಶಿಗ್ಗಾವಿ ವಿಧಾನಸಭಾ ಮತಕ್ಷೇತ್ರಕ್ಕೆ ಹಿಂದುತ್ವದ ಅತಿ ಹೆಚ್ಚು ವೋಟ್ ಬ್ಯಾಂಕ್ ಅನ್ನು ಹೊಂದಿರುವ ಈ ಮತಕ್ಷೇತ್ರಕ್ಕೆ ಸಂಘ ಪರಿವಾರದ ಮನೆತನದಿಂದ ಬಂದಿರುವ ಮಹೇಶ್. ಚ. ತೆಲಕರ. ರವರು ಪ್ರಬಲ ಆಕಾಂಕ್ಷಿಯಾಗಿರುವುದರಿಂದ ಕೇಳಿ ಬರುತ್ತಿದ್ದು ಕಳೆದ ಹಲವಾರು ತಿಂಗಳುಗಳಿಂದ ಶಿಗ್ಗಾವಿ ವಿಧಾನಸಭಾ ಮತಕ್ಷೇತ್ರದಲ್ಲಿ ಮಹೇಶ್ ರವರ ಅಭಿಮಾನಿ ಯುವಕ ಪಡೆ ಸದ್ದಿಲ್ಲದೆ ಸಂಘಟನೆಯ ದಾಪುಗಾಲು ಇಡುತ್ತಿದೆ ಎಂದು ತಿಳಿದು ಬಂದಿದೆ ಮಹೇಶ್ ಚ ತೇಲ್ಕರ್ ರವರು ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಬಾಲ್ಯ ಸ್ವಯಂಸೇವಕರಾಗಿ ಕಳೆದ 36 ವರ್ಷಗಳಿಂದಲೂ ಸಹ ಹಿಂದುತ್ವವಾದಿ ಹಾಗೂ ಸಂಘಟನಾ ಸಂಘ ಪರಿವಾರದ ವತಿಯಿಂದ ದೊರೆತಿರುವ ತಮ್ಮ ಹಲವಾರು ಜಿಲ್ಲೆ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸಿಕೊಂಡು ಬರುತ್ತಿದ್ದಾರೆ ಎಂದು ತಿಳಿದುಬಂದಿವೆ.

ಈ ಬಾರಿ ಶಿಗ್ಗಾವಿ ಮತಕ್ಷೇತ್ರದಲ್ಲಿ ಶಾಸಕರಾಗಿ ಕಾಂಗ್ರೇಸ್ ಪಕ್ಷದ ವತಿಯಿಂದ ಅಧಿಕಾರದ ಚುಕ್ಕಾಣಿ ಹಿಡಿದಿದ್ದು ಮುಂದಿನ ವಿಧಾನಸಭಾ ಚುನಾವಣೆಗೆ ಭಾರತೀಯ ಜನತಾ ಪಕ್ಷದ ವತಿಯಿಂದ ಮಹೇಶ್ ಚ ತೆಲಕರ ವರನ್ನು 2028ಕ್ಕೆ ಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಪ್ರಬಲ ಆಕಾಂಕ್ಷಿಯಾಗಿ ಗುರುತಿಸಿಕೊಂಡಿರುವ ಇವರನ್ನು ಚುನಾವಣೆಯಲ್ಲಿ ಸ್ಪರ್ಧಿಸಿ ತಮ್ಮ ನಾಯಕನ ಗೆಲುವಿಗಾಗಿ ತಂತ್ರ ರೂಪಿಸುತ್ತ ಸದ್ದಿಲ್ಲದೆ ಸಂಘಟನೆ ನಡೆಸಲಾಗುತ್ತಿದೆ ಎಂದು ಹಿಂದುತ್ವದ ವೋಟ್ ಬ್ಯಾಂಕ್ ಅತಿ ಹೆಚ್ಚಾಗಿದ್ದು ಭಾರತೀಯ ಜನತಾ ಪಕ್ಷದ ಕೆಲವು ಯುವ ಮುಖಂಡರು ತಮ್ಮ ಹೆಸರನ್ನು ಹೇಳಲಿಚ್ಚಿಸದೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಾವೇರಿ ಜಿಲ್ಲೆಯಲ್ಲಿ ತೀವ್ರ ಹಿಂದುಳಿದ ತಾಲ್ಲೂಕು ಶಿಗ್ಗಾವಿ ಮತ ವಿಧಾನಸಭಾ ಕ್ಷೇತ್ರ ಹಾವೇರಿ ಜಿಲ್ಲೆಗೆ ಸೇರಿರುವ ಶಿಗ್ಗಾವಿ ವಿಧಾನಸಭಾ ಕ್ಷೇತ್ರ ತೀರಾ ಹಿಂದುಳಿದಿದ್ದು ತಾಲ್ಲೂಕಿನಲ್ಲಿ ಬರುವ ನಗರ ಪಟ್ಟಣ ಗ್ರಾಮಗಳಲ್ಲಿ ರಸ್ತೆ ಕುಡಿಯುವ ನೀರು ಸರ್ಕಾರಿ ಆಸ್ಪತ್ರೆ ಹಾಗೂ ಗ್ರಾಮ ಪಂಚಾಯಿತಿಗಳಿಂದ ಸಿಗುವ ಸರ್ಕಾರದ ಸವಲತ್ತುಗಳು ನಾಗರೀಕರಿಗೆ ಸಿಗದೇ ಶಿಗ್ಗಾವಿ ಮತಕ್ಷೇತ್ರದ ನಾಗರಿಕರು ತೀವ್ರವಾಗಿ ಬೇಸರ ವ್ಯಕ್ತಪಡಿಸಿದ್ದಾರೆ. ಕ್ಯಾಲಕೊಂಡ ಗ್ರಾಮ ಪಂಚಾಯಿತಿಗೆ ಮನೆ ರಿಪೇರಿ ಗೆಂದು ಅರ್ಜಿ ನೀಡಿ ವರ್ಷ ಕಳೆದರೂ ಸಹ ಮಾಹಿತಿ ನೀಡದ ಕ್ಯಾಲುಕೊಂಡ ಗ್ರಾ.ಪಂ. ಹಾವೇರಿ ಜಿಲ್ಲೆ ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಕ್ಯಾಲಕೊಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕ್ಯಾಲುಕೊಂಡ ಗ್ರಾಮದವರೇಯಾದ ನಾಗರೀಕರು ನಮ್ಮ ಮನೆ ಬಿದ್ದುಹೋಗಿದೆ ಇದಕ್ಕೆ ಸರ್ಕಾರದ ವತಿಯಿಂದ ಹೊಸ ಮನೆ ನಿರ್ಮಾಣಕ್ಕೆ ಅಥವಾ ಮನೆ ರಿಪೇರಿಗಾಗಿ ಆರ್ಥಿಕ ಸವಲೊತ್ತಿಗಾಗಿ ಅರ್ಜಿ ನೀಡಿ ವರ್ಷ ಕಳೆದಿದ್ದರೂ ಸಹ ಗ್ರಾಮ ಪಂಚಾಯಿತಿ ಅಧಿಕಾರಿಗಳು ಇದುವರೆಗೂ ಫಲಾನುಭವಿಯ ಮನೆಗೂ ಸಹ ಭೇಟಿ ನೀಡದೇ ಇರುವುದು ಅಧಿಕಾರಿಗಳ ಬೇಜವಾಬ್ದಾರಿ ಸಂಗತಿ ಆಗಿದೆ ಎಂದು ಎಂದು ಗ್ರಾಮದ ಮುಖಂಡರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ 2023 ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೇಸ್ ಅಧಿಕಾರಕ್ಕೆ ಬಂದ ನಂತರ ಇದರಿಂದ ಹಿಂದಿನ ಸುಮಾರು 25 ವರ್ಷಗಳ ಕಾಲ ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ತಮ್ಮ ಅಧಿಕಾರವನ್ನು ನಡೆಸುತ್ತಾ ಶಾಸಕ ಸ್ಥಾನದಿಂದ ನಂತರ ಮಂತ್ರಿ ರಾಜ್ಯದ ಮುಖ್ಯಮಂತ್ರಿ ಹುದ್ದೆಯನ್ನು ಸಹ ಅಲಂಕರಿಸಿದರು.



ಸಹ ತಮ್ಮ ಅಧಿಕಾರ ಶಾಸಕ ಸ್ಥಾನದಿಂದ ಮುಖ್ಯಮಂತ್ರಿ ಹುದ್ದೆಯವರೆಗೆ ಭಾರತೀಯ ಜನತಾ ಪಕ್ಷ ಬೆಳೆಸಿದರು. ಆದರೆ ತಮ್ಮ ಶಿಗ್ಗಾವಿ ಮತಕ್ಷೇತ್ರದ ನಿರಂತರವಾಗಿ ಮತ ನೀಡಿದ ಜನರಿಗೆ ಮಾತ್ರ ಅಭಿವೃದ್ಧಿಯ ದಾರಿಯನ್ನು ತೋರಿಸಲೇ ಇಲ್ಲ.

ಹೀಗಾಗಿ ಹೀಗಿರುವ ಶಾಸಕರು ಕನಿಷ್ಠ ಕ್ಷೇತ್ರದ ಮತ ನೀಡಿದ ಮತದಾರ ಪ್ರಭುಗಳಿಗೆ ಪ್ರಾಮಾಣಿಕವಾಗಿ ಕುಡಿಯುವ ನೀರು ರಸ್ತೆ ಸೌಲಭ್ಯ. ವಾಸಕ್ಕೆ ಮನೆಗಳು ಶೌಚಾಲಯಗಳು ನಿರ್ಮಾಣ ಮಾಡಿಸಿ ಆಸ್ಪತ್ರೆಯಂತಹ ಕನಿಷ್ಠ ಸೌಲಭ್ಯಗಳನ್ನಾದರೂನೀಡಬೇಕಾಗಿ ಶಿಗ್ಗಾವಿ ಮತಕ್ಷೇತ್ರದ ಮತದಾರ ಪ್ರಭುಗಳು ಸಾರ್ವಜನಿಕರು ಸಂಘ ಸಂಸ್ಥೆಗಳ ಮುಖಂಡರು ಉದಯವಾಹಿನಿ ಪತ್ರಿಕೆಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

ಇಷ್ಟೆಲ್ಲ ಹಿಂದುಳಿದಿರುವ ತಾಲ್ಲೂಕಿಗೆ ಮಹೇಶ್ ಚ ತೆಲಕರ ರಂತಹ ಯುವ ನಾಯಕನ ಅವಶ್ಯಕತೆ ಜನಸೇವೆಗೆ ಅಗತ್ಯವಿದೆ ಹೀಗಾಗಿ ಇವರನ್ನು ಬರುವ 2028ರ ವಿಧಾನಸಭಾ ಚುನಾವಣೆಗೆ ಪ್ರಬಲ ಆಕಾಂಕ್ಷಿ ಹಾಗೂ ಪ್ರಬಲ ಅಭ್ಯರ್ಥಿಯನ್ನಾಗಿ ಮಾಡುವುದೇ ನಮ್ಮ ಗುರಿ ಎಂದು ಹಲವಾರು ಮುಖಂಡರು ಅಭಿಮಾನಿಗಳು ಪತ್ರಿಕೆಗೆ ತಿಳಿಸಿದ್ದಾರೆ.

## ಮರೀಚಿಕೆಯಾದ ಸರ್ಕಾರಿ ಸವಲತ್ತುಗಳು

**ಗ್ರಾಮಗಳಲ್ಲಿ ವಾಸಿಸುತ್ತಿರುವ ನಾಗರಿಕರಿಗೆ ಇಂದಿಗೂ ಸಹ ಗ್ರಾಮ ಪಂಚಾಯಿತಿ ವತಿಯಿಂದ ಸಿಗುವ ಸೌಲತ್ತುಗಳ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದೆ ಸರ್ಕಾರದ ಯಾವೊಂದು ಕಾರ್ಯಕ್ರಮಗಳು ಸಹ ನಾಗರಿಕರಿಗೆ ತಲುಪುವುದೇ ಇರಲಿ ಕನಿಷ್ಠಪಕ್ಷ ಶಿಗ್ಗಾವಿ ಮತಕ್ಷೇತ್ರದ ನಾಗರಿಕರಿಗೆ ಕನಿಷ್ಠ ಮಾಹಿತಿಯೂ ಇಲ್ಲದಂತಾಗಿದೆ .**



